ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 39 ಡಿಸೆಂಬರ್ 9, 1979 40 ಪೈಸೆ

ಮೈಕೋ ಕಾರ್ಮಿಕರ ಬೇಡಿಕೆ ಈಡೇರಲಿ

ಸುಮಾರು 7000 ಮೈಕೋ ಕಾರ್ಖಾನೆಯ ಕಾರ್ಮಿಕರ ಮುಷ್ಕರ ಅಕ್ಟೋಬರ್ 5 ರಂದು ಪ್ರಾರಂಭವಾಗಿ ಇನ್ನೂ ಮುಂದುವರಿದಿದೆ. ಕಾರ್ಮಿಕರು ಐಕ್ಯತೆಯಿಂದಲೂ, ಅತ್ಯಂತ ಸಂಯಮದಿಂದಲೂ ವರ್ತಿಸಿಕೊಂಡು ಬಂದಿದ್ದಾರೆ.

ಪ್ರಬಲವಾದ ಬಹುರಾಷ್ಟ್ರೀಯ ಸಂಸ್ಥೆಗೆ ಸಂಬಂಧಪಟ್ಟಿರುವ ಆಡಳಿತ ವರ್ಗ ಈಗ ನಡೆಯುತ್ತಿರುವ ಶಾಂತಿಯುತ ಹೋರಾಟವನ್ನು ಮುರಿಯಲು ಕೀಳುಮಟ್ಟದ ಅನೇಕ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಕಾರ್ಮಿಕರ ಮನೆಮನೆಗೆ ರೌಡಿಗಳನ್ನು ಕಳುಹಿಸಿ ಅವರನ್ನು ಹೆದರಿಸುವುದು ಮತ್ತು ಕೆಲಸಕ್ಕೆ ಹೋಗುವಂತೆ ಒತ್ತಾಯಪಡಿಸುವುದು, ಸಂಘದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸುವುದು, ಸಂಘದ ಕಾರ್ಯದರ್ಶಿಯನ್ನೂ, ಅಧ್ಯಕ್ಷರನ್ನೂ ಕೊಲ್ಲುವ ಬೆದರಿಕೆ ಹಾಕುವುದು ಮುಂತಾದ ಅನೇಕ ವಿಧಾನಗಳ ಮೂಲಕ ಮುಷ್ಕರವನ್ನು ಮುರಿಯಲು ಪ್ರಯತ್ನ ನಡೆದಿದೆ. ಸಂಘದ ಕಾರ್ಯದರ್ಶಿಯವರು ಇನ್ನೂ ಆಸ್ಪತ್ರೆಯಲ್ಲೇ ನರಳುತ್ತಿದ್ದಾರೆ. ಈ ಕಾರ್ಮಿಕ ವಿರೋಧಿ ಕೃತ್ಯಗಳಿಗೆ ಪೋಲೀಸರ ಸಂಪೂರ್ಣ ಬೆಂಬಲವಿರುತ್ತದೆ,

ಸಂಪಾದಕೀಯ

ಸರಕಾರ ಅನುಸರಿಸುವ ಧೋರಣೆ ಬಹಳ ಆಶ್ಚರ್ಯಕರವಾಗಿದೆ. ಅದು ಸಂಪೂರ್ಣ ಮಾಲಕರ ಪರವಾಗಿದೆಯೇ ಹೊರತು ಕಾರ್ಮಿಕರ ಪರವಾಗಿಲ್ಲ. ಕಾರ್ಮಿಕರ ಬೇಡಿಕೆಗಳಾದರೂ ದೊಡ್ಡದಾಗಿಲ್ಲ. ಸಸ್ಪೆಂಡ್ ಮಾಡಲ್ಪಟ್ಟ 26 ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದೂ, ಎರಡು ಯಂತ್ರಗಳಲ್ಲಿ ಒಬ್ಬ ಕಾರ್ಮಿಕ ದುಡಿಯುವುದನ್ನು ನಿಲ್ಲಿಸಬೇಕೆಂದೂ ಮುಂತಾದ ಬೇಡಿಕೆಗಳು ಈಡೇರಿಸಲು ಸಾಧ್ಯವಾಗದಿರುವ ಬೇಡಿಕೆಗಳೇನಲ್ಲ; ಕಾರ್ಮಿಕ ಪ್ರತಿನಿಧಿಗಳನ್ನೂ ಮಾಲಕ ಪ್ರತಿನಿಧಿಗಳನ್ನೂ ಕರೆಸಿ ಈ ಪ್ರಶ್ನೆಯನ್ನು ಬಗೆಹರಿಸಲು ಪ್ರಯತ್ನಿಸದಿರುವುದು ಖಂಡನೀಯವಾಗಿದೆ. ಈಗ ಸರಕಾರ ಕಾರ್ಮಿಕರ ಬೇಡಿಕೆಗಳನ್ನು ಪಂಚಾಯಿತಿಗೆ ಕಳುಹಿಸಿ ಮುಷ್ಕರವನ್ನು ನಿಷೇಧಿಸಿದೆ. ಆದರೂ ಸಹ ಕಾರ್ಮಿಕರು ದಿಟ್ಟತನದಿಂದ ತಮ್ಮ ಹೋರಾಟವನ್ನು ಮುಂದುವರಿಸಿದ್ದಾರೆ. ಅವರಿಗೆ ಎಲ್ಲಾ ರಾಜಕೀಯ ಪಕ್ಷಗಳ ಮತ್ತು ಕಾರ್ಮಿಕ ಸಂಘಗಳ ಬೆಂಬಲ ದೊರೆತಿದೆ.

ಇನ್ನಾದರೂ ರಾಜ್ಯ ಸರಕಾರ ಮಧ್ಯ ಪ್ರವೇಶ ಮಾಡಿ ಈ ವಿವಾದವನ್ನು ಬಗೆಹರಿಸಲು ಪ್ರಯತ್ನಿಸುವುದು ಅಗತ್ಯ. ಎಲ್ಲಾ ರೀತಿಯ ಪ್ರಚೋದನೆಗಳನ್ನೂ, ಅಪಪ್ರಚಾರಗಳನ್ನೂ ಎದುರಿಸಿ ಐಕ್ಯತೆಯಿಂದ ಹೋರಾಡುತ್ತಿರುವ ಮೈಕೋ ಕಾರ್ಮಿಕರ ಮುಷ್ಕರ ಯಶಸ್ವಿಯಾಗಲೆಂದು ನಾವು ಹಾರೈಸುತ್ತೇವೆ. ●

ಮೈಕೋ ಕಾರ್ಮಿಕರ ಹೋರಾಟಕ್ಕೆ ಎಲ್ಲೆಡೆ ಬೆಂಬಲ

ಯಶಸ್ವಿ ಬೆಂಗಳೂರು ಬಂದ್

ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ರಾಜಕೀಯ ಪಕ್ಷಗಳು ಹಾಗೂ ಕಾರ್ಮಿಕ ಸಂಘಟನೆಗಳ ಸೌಹಾರ್ದ ಸಮಿತಿ ನೀಡಿದ್ದ ಕರೆಯನ್ನು ಅನುಸರಿಸಿ ತಾ. 3-12-79 ರಂದು ಬೆಂಗಳೂರು ಬಂದ್ ಆಚರಿಸಲಾಯಿತು. ಬೆಂಗಳೂರು ನಗರದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾದಿ ನಾಗರೀಕರು, ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ವ್ಯಾಪಾರಿಗಳು ತಮ್ಮ ಸಂಪೂರ್ಣ ಬೆಂಬಲವನ್ನು ಬಂದ್‌ಗೆ ನೀಡಿದ್ದವು. ಕರ್ನಾಟಕ ಸರಕಾರ, ಎರಡು ತಿಂಗಳಿಂದ ಹೋರಾಟ ನಡೆಸುತ್ತಿರುವ ಮೈಕೋ ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಮಧ್ಯ ಪ್ರವೇಶಿಸಿ ಇತ್ಯರ್ಥಪಡಿಸುವುದರ ಬದಲು, ಮುಷ್ಕರ ನಿಷೇಧಾಜ್ಞೆಯನ್ನು ಘೋಷಿಸಿ ಕಾರ್ಮಿಕರ ಹೋರಾಟವನ್ನು ಮುರಿಯಲು ನಿರ್ಧರಿಸಿದ್ದನ್ನು ಪ್ರತಿಭಟಿಸಲು ಬಂದ್‌ಗೆ ಕರೆ ನೀಡಲಾಗಿತ್ತು.

ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳಾದ ಹೆಚ್. ಎ. ಎಲ್., ಬಿ. ಇ. ಎಲ್., ಐ. ಟಿ. ಐ, ಬಿ. ಹೆಚ್. ಇ. ಎಲ್. ಮುಂತಾದ ಕಾರ್ಖಾನೆಗಳು, ಜೀವ ವಿಮೆ, ಬ್ಯಾಂಕ್, ಖಾಸಗಿ ಕ್ಷೇತ್ರದ ಕಾರ್ಖಾನೆಗಳು ಹಾಗೂ ಇಂಡಸ್ಟ್ರಿಯಲ್ ಎಸ್ಟೇಟ್‌ಗಳಲ್ಲಿರುವ ಸುಮಾರು ಎರಡು ಸಾವಿರ ಸಣ್ಣ ಕಾರ್ಖಾನೆಗಳು, ಹೋಟೆಲ್, ಪೆಟ್ರೋಲ್‌ಬಂಕ್, ಸಣ್ಣ ಹಾಗೂ ಸಗಟು ವ್ಯಾಪಾರದ ಅಂಗಡಿಗಳು, ಶಾಲಾ ಕಾಲೇಜುಗಳು ಬಂದ್ ಕರೆಗೆ ಓಗೊಟ್ಟು ಹರತಾಳವನ್ನು ಆಚರಿಸಿದವು. ಬಿ. ಟಿ. ಎಸ್. ಮತ್ತು ರಾಜ್ಯ ರಸ್ತೆ ಸಾರಿಗೆಯಲ್ಲಿ ಶೇಕಡ 30 ರಷ್ಟು ವಾಹನಗಳು ಮಾತ್ರ ಎಂದಿನಂತೆ ಸಂಚಾರ ಮಾಡಿದವು. ಶೇಕಡ ಹತ್ತರಷ್ಟು ಆಟೋಗಳು ಹಾಗೂ ಕೆಲವು ಸಿನಿಮಾ ಮಂದಿರಗಳು ಮಾತ್ರ ತಮ್ಮ ವ್ಯವಹಾರ ನಡೆಸಿದರು.

ನಗರದ ನಾನಾ ಕಡೆಗಳಲ್ಲಿ ನಡೆಸಿದ ಸಮೀಕ್ಷೆಯಿಂದ ಕಂಡು ಬಂದದ್ದೆಂದರೆ, ನಗರದ ಶೇಕಡ 90 ರಷ್ಟು ಭಾಗದಲ್ಲಿ ಬಂದ್ ಆಚರಿಸಲಾಗಿತ್ತು. ಒಟ್ಟ ಪೋಲೀಸ್ ಪೇದೆಯೂ ಪತ್ತೆಯಿಲ್ಲದ ಗಂಗೇನಹಳ್ಳಿಯಂತಹ ನಗರದ ಹೊರ ಪ್ರದೇಶಗಳು ಕೂಡಾ ಬಂದ್‌ನಲ್ಲಿ ಭಾಗ ವಹಿಸಿದ್ದವು.

[ಕಡೆಯ ಪುಟ ನೋಡಿ]

ಒಂದೇ ಗುರಿಯುಳ್ಳ ಎರಡು ಚುನಾವಣಾ ಪ್ರಣಾಳಿಕೆಗಳು

ಆಳುವ ಪಕ್ಷಗಳಾಗಿದ್ದ ಇಂದಿರಾ ಕಾಂಗ್ರೆಸ್ ಮತ್ತು ಜನತಾಪಕ್ಷ ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ಬಿಡುಗಡೆ ಮಾಡಿದ್ದಾರೆ.

ಯಥಾ ಪ್ರಕಾರ ಎಲ್ಲಾ ಬಂಡವಾಳಶಾಹಿ ಪಕ್ಷಗಳಂತೆ ಎರಡೂ ಪಕ್ಷಗಳೂ ಸಮಾಜದ ದುರ್ಬಲ ವರ್ಗಗಳಾದ ಹರಿಜನ, ಗಿರಿಜನರಿಗೆ, ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ, ರೈತ ಹಾಗೂ ಕಾರ್ಮಿಕರಿಗೆ ಧಾರಾಳವಾಗಿ ಭರವಸೆಗಳನ್ನು ನೀಡಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷ ಮೂವತ್ತು ವರ್ಷಗಳ ಕಾಲ ತನ್ನ ಅಧಿಕಾರಾವಧಿಯಲ್ಲಿ ಪಾಲಿಸಿದ ನೀತಿಗಳನ್ನಾಗಲಿ, ಜನತಾಪಕ್ಷ ಎರಡೂವರೆ ವರ್ಷದ ತನ್ನ ಅಧಿಕಾರದಲ್ಲಿ ಅಳವಡಿಸಿಕೊಂಡಿದ್ದ ನೀತಿಗಳನ್ನಾಗಲಿ ತೊರೆಯುವುದಾಗಿ ಘೋಷಣೆಯಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಈ ಪಕ್ಷಗಳಿಗೆ ಅಧಿಕಾರದಿಂದ ತಾವು ಕಿತ್ತೊಗೆಯಲ್ಪಟ್ಟಿದ್ದು ಅನುಸರಿಸಿದ ನೀತಿಗಳಿಂದ ಎಂಬುದು ಇನ್ನೂ ಮನವರಿಕೆಯಾಗಿಲ್ಲ.

ಇಂದಿರಾ ಕಾಂಗ್ರೆಸ್‌ನ ಕರೆ ಗಮನಿಸುವಂಥಾದ್ದು, ಅವರಿಗೆ "ಅಪೂರ್ಣವಾಗಿರುವ ಕ್ರಾಂತಿಯನ್ನು ಮುಂದುವರಿಸಬೇಕಾಗಿದೆ". ಐತಿಹಾಸಿಕ ಮಾರ್ಚಿ 1977ರ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಅಧಿಕಾರದಿಂದ ಕಿತ್ತೆಸೆದುದರಿಂದ ಯಾವ "ಕ್ರಾಂತಿ"ಯನ್ನು ಮುಂದುವರಿಸಲು ಸಾಧ್ಯವಾಗಲಿಲ್ಲವೋ ಆ ಕ್ರಾಂತಿಯನ್ನು ಈಗ ಮುಂದುವರಿಸಬೇಕಾಗಿದೆ.

ಇಂದಿರಾ ಕಾಂಗ್ರೆಸ್‌ನವರು ಹೇಳಿಕೊಂಡಿರುವುದೆಲ್ಲಾ ಸಾಧಿಸಿರುವುದೇ ನಿಜವಾದರೆ, ಪ್ರಜೆಗಳು ಅವರನ್ನು ಅಧಿಕಾರದಿಂದ ಏಕೆ ಇಳಿಸಿದರೆಂಬುದನ್ನು ತಿಳಿಸುವ ಗೋಜಿಗೆ ಪ್ರಣಾಳಿಕೆ ಹೋಗಿಲ್ಲ. ತುರ್ತುಪರಿಸ್ಥಿತಿಯ ಕ್ರೂರ ಆಡಳಿತದ ಬಗ್ಗೆಯಾಗಲಿ, ಸಹಸ್ರಾರು ಜನರ ಮೂಕ ಅವಮಾನ, ಕ್ರೌರ್ಯ, ನೋವು, ಹಿಂಸೆಗಳ ಬಗ್ಗೆ ಅವರಿಗೆ ಯಾವ ಪಶ್ಚಾತ್ತಾಪವೂ ಇಲ್ಲ. ಬದಲಿಗೆ, ಅಧಿಕಾರ ದುರುಪಯೋಗ ಮತ್ತು ಭ್ರಷ್ಟಾಚಾರದ ಅಪಾದನೆಗಳ ವಿಚಾರಣೆಗಾಗಿ ನೇಮಕವಾಗಿರುವ ಆಯೋಗಗಳು ಹಾಗೂ ವಿಶೇಷ ನ್ಯಾಯಾಲಯಗಳನ್ನು "ಕಾಂಗ್ರೆಸ್ಸಿಗರನ್ನು ಮಾಡದಿರುವ ತಪ್ಪಿಗಾಗಿ" ಶಿಕ್ಷಿಸಲು ಮಾಡಿರುವ ಉಪಾಯವೆಂದು ಆಪಾದಿಸಿದೆ.

ಆಪಾದನೆಗೆ ಗುರಿಯಾಗಿರುವ ನ್ಯಾಯಾಲಯಗಳು ಇಂದಿರಾಗಾಂಧಿಯವರಿಗೆ ಹಾಗೂ ಅವರ ಸಹೋದ್ಯೋಗಿಗಳಿಗೆ ತಮ್ಮ ನಿರ್ದೋಷಿತನವನ್ನು ಸಾಬೀತುಪಡಿಸಲು ಸಾಕಷ್ಟು ಅವಕಾಶ ನೀಡಿವೆ. ತಮ್ಮ ವಿರುದ್ಧದ ಆಪಾದನೆಗಳನ್ನು ತಿರಸ್ಕರಿಸಲು ಸಾಧ್ಯವಿಲ್ಲದಿರುವುದರಿಂದ ಅವರು ಹೀಗೆ ಮಾಡಿದ್ದಾರೆ. ವಿಚಾರಣಾ ಆಯೋಗಗಳು ಇಂದಿರಾಗಾಂಧಿ ಮತ್ತವರ ಗುಂಪಿನ ಮೇಲೆ ಇರುವ ಆರೋಪಗಳನ್ನು ಸಿದ್ಧಪಡಿಸಿವೆಯಲ್ಲದೆ, ಈ ಬಗ್ಗೆ ಕೂಡಲೇ ಕಾನೂನು ಕ್ರಮಕೈಗೊಳ್ಳಲು ಆದೇಶ ನೀಡಿವೆ. ಕಾನೂನಿನ ಕೈಗಳಿಂದ ತಪ್ಪಿಸಿಕೊಳ್ಳಲು ಅಧಿಕಾರ ಪಡೆಯುವ ಇಂದಿರಾಗಾಂಧಿಯವರ ಯೋಜನೆಯೇ "ಅಪೂರ್ಣ ಕ್ರಾಂತಿಯನ್ನು ಮುಂದುವರಿಸುವುದರ ಅರ್ಥ".

ಕಾಂಗ್ರೆಸ್ (ಐ)ನ ಅಧ್ಯಕ್ಷೆ ತಮ್ಮ ಅನೇಕ ಹೇಳಿಕೆಗಳಲ್ಲಿ ತುರ್ತುಪರಿಸ್ಥಿತಿಯ ಅತಿರೇಕಗಳ ಬಗ್ಗೆ ಸಾಂದರ್ಭಿಕವಾಗಿ ಹೇಳಿಕೆಗಳನ್ನು ನೀಡಿ, ಔಪಚಾರಿಕವಾಗಿ ಜನತೆಯ "ಕ್ಷಮೆ" ಕೇಳಿದ್ದರೂ ಚುನಾವಣಾ ಪ್ರಣಾಳಿಕೆಯಲ್ಲಿ ಅಸಂಖ್ಯಾತ ಜನರು ಅನುಭವಿಸಿದ ನರಕ ಯಾತನೆ, ಕೊಲೆಗಳಿಗೆ ಯಾವ ರೀತಿಯ ಪಶ್ಚಾತ್ತಾಪವನ್ನೂ ವ್ಯಕ್ತಪಡಿಸದಿರುವುದನ್ನು ಗಮನಿಸಲು ಪಾಲಿಟ್‌ಬ್ಯೂರೋ ಕರೆನೀಡಿದೆ. ವಿಚಾರಣೆ ಇಲ್ಲದೆ ಬಂಧನ, ಪತ್ರಿಕಾ ಸ್ವಾತಂತ್ರ್ಯಕ್ಕೆ ನಿರ್ಬಂಧ, ಪೋಲೀಸರ ಅಮಾನುಷ ಕ್ರೌರ್ಯ ಇದಾವುದರ ಬಗ್ಗೆಯೂ ಪ್ರಣಾಳಿಕೆ ಚಕಾರವೆತ್ತಿಲ್ಲ. ಈ ಎಲ್ಲಾ ದಬ್ಬಾಳಿಕೆಗಳ ಸೂತ್ರಧಾರರಾಗಿದ್ದ ಸಂಜಯಗಾಂಧಿ ಮತ್ತು ಬನ್ಸೀಲಾಲರು ಇಂದಿರಾ ಕಾಂಗ್ರೆಸ್ಸಿನಲ್ಲಿ ಮತ್ತೆ ತಮ್ಮ ಹಳೆಯ ಸ್ಥಾನಕ್ಕೆ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ "ಅಪೂರ್ಣ ಕ್ರಾಂತಿ"ಯ ಮುಂದುವರಿಸುವಿಕೆಯನ್ನು ನೋಡಬೇಕಾಗಿದೆ.

ಕಾಂಗ್ರೆಸ್ (ಐ) ತಾನು ಮಾತ್ರ ಸುಭದ್ರ ಸರಕಾರ ನೀಡಲು ಸಾಧ್ಯವೆಂದು ಹೇಳಿಕೊಂಡಿದೆ. ಜನತಾಪಕ್ಷವನ್ನು "ಕಿಚಡಿ" ಪಕ್ಷವೆಂದು ತಿರಸ್ಕರಿಸಿದೆ. ಅಲ್ಲದೆ, ಜನತಾಪಕ್ಷ ಬೇಗ ತುಂಡು, ತುಂಡಾಗುತ್ತದೆಂದು ಹೇಳಿದೆ. ಆದರೆ ಎಲ್ಲರಿಗೂ ತಿಳಿದಿರುವಂತೆ ನಿಚ್ಚಳ ಬಹುಮತ ಪಡೆದಿದ್ದ ಕಾಂಗ್ರೆಸ್ ಪಕ್ಷ ತನ್ನ ಭದ್ರತೆಯನ್ನು ಉಳಿಸಿಕೊಳ್ಳಲಾರದೆ ಹೋಯಿತು. ಇದರರ್ಥ ಆಂತರಿಕ ಭದ್ರತೆಗಾಗಿ ತುರ್ತುಪರಿಸ್ಥಿತಿಯನ್ನು ಹೇರಲಾಯಿತೆಂದು ಹೇಳುವುದು. ತುರ್ತುಪರಿಸ್ಥಿತಿಯಲ್ಲಿಯೂ ಕಾಂಗ್ರೆಸ್ (ಐ)ನ ಅಧಿಕಾರಕ್ಕೆ ಸಮೀಪವಿದ್ದವರ ಇಷ್ಟದಂತೆ ಮುಖ್ಯಮಂತ್ರಿಗಳನ್ನು ಬದಲಾಯಿಸಲಾಯಿತು. ಆದ್ದರಿಂದ, ಇಂದಿರಾ ಕಾಂಗ್ರೆಸ್‌ಗೆ ಮತನೀಡಿದರೆ ತುರ್ತುಪರಿಸ್ಥಿತಿಯ ಭದ್ರತೆ ಮಾತ್ರ ಜನತೆಗೆ ಸಿಗುತ್ತದೆಂದು ಪಾಲಿಟ್ ಬ್ಯೂರೋ ಜನತೆಗೆ ಎಚ್ಚರಿಸಿದೆ.

[ಕಡೆಯ ಪುಟ ನೋಡಿ]

ಎ. ಕೆ. ಸುಬ್ಬಯ್ಯನವರ ನಿಷ್ಠೆ ವಿದೇಶಿ ಬಂಡವಾಳಗಾರರಿಗೆ

—ಕಾಂ. ವಿ. ಜೆ. ಕೆ. ನಾಯರ್

"ಭಾರತದಲ್ಲಿ ಪ. ಜರ್ಮನಿ ಹಿತಾಸಕ್ತಿಗಳನ್ನು ಹಾಳುಮಾಡುವುದೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಗುರಿ"ಯೆಂದು ಎ.ಕೆ. ಸುಬ್ಬಯ್ಯನವರು ತಾ. 1-12-79 ರಂದು ಪ್ರಕಟವಾದ ಪತ್ರಿಕೆಗಳಲ್ಲಿ ಹೇಳಿಕೆ ನೀಡಿದ್ದಾರೆ. ಭಾರತದಲ್ಲಿರುವ ಯಾವುದೇ ವಿದೇಶಿ ಹಿತಾಸಕ್ತಿಗಳ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಅನುಕಂಪವಿಲ್ಲ. ಬಹುಶಃ ಎ. ಕೆ. ಸುಬ್ಬಯ್ಯನವರ ತಲೆಯಲ್ಲಿ ಸಿ. ಪಿ. ಐ. (ಎಂ) ಮುಖಂಡ ಪಿ. ರಾಮಮೂರ್ತಿಯವರು ಬಿ. ಹೆಚ್. ಇ. ಎಲ್. - ಸೈಮನ್ಸ್ ಕಂಪನಿಗಳ ನಡುವೆ ನಡೆದ ದೇಶದ್ರೋಹಿ ಒಪ್ಪಂದದ ನೆನಪು ಉಳಿದಿರಬೇಕು. ಆಶ್ಚರ್ಯವೆಂದರೆ ತಮ್ಮ ಹೇಳಿಕೆಯನ್ನು ರಾಷ್ಟ್ರದ ಹಿತಕ್ಕಾಗಿ ಎಂದು ಹೇಳಿಕೊಂಡಿರುವುದು. ಎ. ಕೆ. ಸುಬ್ಬಯ್ಯನವರು ಹಾಗೂ ಅವರ ಮೂಲ ಸಂಸ್ಥೆ ವಿದೇಶಿ ಹಿತಾಸಕ್ತಿಗಳನ್ನು ರಕ್ಷಿಸುತ್ತಿರುವಾಗ ತಾವು ದೇಶಪ್ರೇಮಿಗಳೆಂದು ಅವರು ಹೇಗೆ ಹೇಳಿಕೊಳ್ಳುತ್ತಾರೋ ತಿಳಿಯದು.

ನಮ್ಮ ದೇಶದಲ್ಲಿ ಅಲ್ಪ ಬಂಡವಾಳ ಹೂಡಿ ಅಪಾರ ಲಾಭವನ್ನು ಕೊಳ್ಳೆ ಹೊಡೆದು ತಮ್ಮ ದೇಶಕ್ಕೆ ಸಾಗಿಸುತ್ತಿರುವ ವಿದೇಶಿ ಕಂಪನಿಗಳನ್ನು ನಮ್ಮ ಪಕ್ಷ ವಿರೋಧಿಸುತ್ತದೆಯಾದರೂ, ಪ್ರಸಕ್ತ ನಡೆಯುತ್ತಿರುವ ಮೈಕೋ ಕಾರ್ಮಿಕರ ಹೋರಾಟಕ್ಕೂ ಪಕ್ಷದ ನೀತಿಗೂ ಸಂಬಂಧವಿಲ್ಲ. ಮೈಕೋ ಕಾರ್ಮಿಕರ ಸಂಘ ಸಿ. ಐ. ಟಿ. ಯು.ಗೆ ಸಂಯೋಜಿತಗೊಂಡ ಸಂಘವಲ್ಲ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸಂಘವೂ ಅಲ್ಲ. ಮೈಕೋ ಕಾರ್ಮಿಕರ ಹೋರಾಟ ನ್ಯಾಯಯುತವಾದ್ದರಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಕಾರ್ಮಿಕರ ಹೋರಾಟಕ್ಕೆ ಹಾಗೂ ಬೆಂಗಳೂರು ಬಂದ್‌ಗೆ ಬೆಂಬಲ ಕೊಟ್ಟಿದೆ. ಅಲ್ಲದೆ, ಬೆಂಗಳೂರಿಗೆ ಹೊಸದಾಗಿ ಪರಿಚಯವಾಗಿರುವ ಮಾಲೀಕರ ಏಜಂಟರ ಗೂಂಡಾಗಿರಿಯಿಂದ, ಕಾರ್ಮಿಕರನ್ನು ಅವರ ಮನೆಗಳ ಮುಂದೆ ಥಳಿಸುವುದು, ಚಾಕು, ಚೈನುಗಳಿಂದ ಕಾರ್ಮಿಕರನ್ನು ಹೆದರಿಸುವುದು ನಡೆದಿದೆ. ಆದ್ದರಿಂದ ಸಹಜವಾಗಿ ಇತರೆ ಎಡ ಹಾಗೂ ಪ್ರಜಾಸತ್ತಾತ್ಮಕ ಪಕ್ಷಗಳ ಹಾಗೆ ನಮ್ಮ ಪಕ್ಷವೂ ಮೈಕೋ ಕಾರ್ಮಿಕರ ಹೋರಾಟಕ್ಕೆ ಹಾಗೂ ಬೆಂಗಳೂರು ಬಂದ್‌ಗೆ ತನ್ನ ಸಂಪೂರ್ಣ ಸಹಾಯ ನೀಡಿದೆ.

ತದ್ವಿರುದ್ಧವಾಗಿ ಬಂದ್ ಸಮಯದಲ್ಲಿ ಹಿಂಸಾಚಾರ ನಡೆಸಲು ಎ. ಕೆ. ಸುಬ್ಬಯ್ಯನವರು ಕರೆ ನೀಡಿರುವುದು ವಿಷಾದಕರ. ತನ್ನ ಚಡ್ಡಿವಾಲ ಸ್ವಯಂ ಸೇವಕರನ್ನು ಬಂದ್ ಮುರಿಯಲು ನಿರ್ಧರಿಸಿರುವುದು ಎ. ಕೆ. ಸುಬ್ಬಯ್ಯನವರು ನ್ಯಾಯವಾದ ಕಾರ್ಮಿಕ ಚಳುವಳಿಯನ್ನು ಮುರಿಯಲು ಫ್ಯಾಸಿಸ್ಟ್ ಆಕ್ರಮಣಕಾರಿ 'ಪ್ಯೂರರ್' ಪಾತ್ರವನ್ನು ವಹಿಸಿದ ಹಾಗೆ ತೋರುತ್ತೆ. ಬಂದ್ ಮುರಿಯಲು ಹಾಗೂ ಹಿಂಸಾಚಾರ ನಡೆಸಲು ತನ್ನ ಸ್ವಯಂಸೇವಕರಿಗೆ ಬಹಿರಂಗ ಕರೆ ನೀಡಿರುವುದು.ಆ ದಿನ ಮತೀಯ ಗಲಭೆಗಳನ್ನು ಪ್ರಚೋದಿಸಲು ಎ. ಕೆ. ಸುಬ್ಬಯ್ಯನವರು ಯೋಚಿಸಿರುವಂತೆ ಕಾಣುತ್ತದೆ.

ಹೈದರಾಬಾದ್ ಕಾರ್ಖಾನೆಯ ಹಿತರಕ್ಷಿಸಲು ಮೈಕೋ ಕಾರ್ಮಿಕರ ಹೋರಾಟ ನಡೆಯುತ್ತಿದೆ ಎಂಬ ಆರೋಪವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತಿರಸ್ಕರಿಸುತ್ತದೆ. ಸುಬ್ಬಯ್ಯನವರು ಹೇಳುವಂತೆ ಜನತೆ ಕಾಳಸಂತೆ ಖದೀಮರ ವಿರುದ್ಧ ಚಳುವಳಿ ನಡೆಸುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಸುಬ್ಬಯ್ಯನವರ ಗುಂಪು ಕಾಳಸಂತೆ ಖದೀಮರು ಮತ್ತು ವ್ಯಾಪಾರಿಗಳ ವಿರುದ್ಧ ಚಕಾರವೆತ್ತಲು ಸಿದ್ಧವಿಲ್ಲ. ಏಕೆಂದರೆ ಅವರ ಗುಂಪು ಈ ವರ್ತಕರ ಬೆಂಬಲದಿಂದಲೇ ಉಳಿದಿರುವುದರಿಂದ.

ಎಲ್ಲಾ ಪ್ರಜಾಪ್ರಭುತ್ವವಾದಿಗಳು ಹಾಗೂ ಜನಸಾಮಾನ್ಯರು ಬೆಂಗಳೂರು ಬಂದ್‌ಗೆ ಸಂಪೂರ್ಣ ಸಹಕಾರ ನೀಡುವುದರ ಮೂಲಕ ಮೈಕೋ ಆಡಳಿತ ವರ್ಗಕ್ಕೆ ಹಾಗೂ ರಾಷ್ಟ್ರ ವಿರೋಧಿಗಳಿಗೆ ಸರಿಯಾದ ಉತ್ತರ ಕೊಡಬೇಕೆಂದು, ಮಾರ್ಕ್ಸ್‌ವಾದಿಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್ ಕೇಳಿಕೊಂಡಿದ್ದಾರೆ.

ಗುಲ್ವಾಡಿಯಲ್ಲಿ ಬೀಡಿ ಕಾರ್ಮಿಕರ ಸಭೆ

ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕಿನ ಗುಲ್ವಾಡಿಯಲ್ಲಿ ಬೀಡಿ ಕಾರ್ಮಿಕರ ಪ್ರಥಮ ಸಭೆಯು ತಾ. 2-12-79 ರಂದು ಸಿ. ಐ. ಟಿ ಯು. ಮುಖಂಡ ಕಾಂ. ಅಬ್ರಹಾಂ ಕರ್ಕಡ ಅಧ್ಯಕ್ಷತೆಯಲ್ಲಿ ಜರುಗಿತು. ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಂಘಟಿತರಾಗಿ ಹೋರಾಡಬೇಕೆಂದು ಅಧ್ಯಕ್ಷರು ಕರೆ ನೀಡಿದರು.

ಪ್ರಾರಂಭದಲ್ಲಿ ತಾಲ್ಲೂಕು ಯುವಕ ಸಂಘದ ಕಾರ್ಯದರ್ಶಿ ಕಾಂ. ವಿ. ಮಹಾಬಲ ದೇವಾಡಿಗ ಸ್ವಾಗತಿಸಿದರು. ಕಾಂ. ಮಹಮ್ಮದ್ ಧನ್ಯವಾದ ಅರ್ಪಿಸಿದರು.

ಪದಾಧಿಕಾರಿಗಳು ಹಾಗೂ ಸಮಿತಿ ಸದಸ್ಯರಾಗಿ ಕೆಳಕಂಡವರು ಆಯ್ಕೆಯಾಗಿದ್ದಾರೆ. ಅಧ್ಯಕ್ಷೆ-ಅಕ್ಕಯ್ಯ, ಉಪಾಧ್ಯಕ್ಷೆ-ಶಾಂತ, ಕಾರ್ಯದರ್ಶಿ-ಲಲಿತ, ಸಹ ಕಾರ್ಯದರ್ಶಿ-ಹೆಚ್. ಸಾಧು, ಸದಸ್ಯರು:ಗಿರಿಜ, ರತ್ನಾವತಿ, ಸರ್ವೇಶ್ರೀ, ಶಾರದ, ರಾಧ, ಅಮೀನಾಬಿ, ಪ್ಯಾರೀಮಾ ಹಾಗೂ ಗೌರಿ.

ಶಿಡ್ಲಘಟ್ಟ ಪುರಸಭಾ ಸದಸ್ಯರು ರಾಜೀನಾಮೆ ನೀಡಲಿ!

ಸಂಪಾದಕರ ಸನ್ನಿಧಾನಕ್ಕೆ,

ಮಾನ್ಯರೇ,

ಶಿಡ್ಲಘಟ್ಟ ಟೌನ್ ಸುತ್ತಮುತ್ತ ಹರಡಿರುವ ಮೆದುಳು ಜ್ವರದ ಬಗ್ಗೆ ಪುರಸಭೆಯವರಿಗೆ ಮನವಿಪತ್ರ ನೀಡಿ ಗಮನ ಸೆಳೆದಿದ್ದರೂ ಯಾವ ಕ್ರಮವನ್ನೂ ತೆಗೆದುಕೊಳ್ಳದಿರುವುದು ಖಂಡನೀಯ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಮುಖಂಡರಾದ ಜೆ. ದೊರೆಸ್ವಾಮಿ ಮತ್ತು ಪಕ್ಷದ ಕಾರ್ಯಕರ್ತರು ಮೂರು ದಿನಗಳ ಕಾಲ ನಗರದಲ್ಲಿ ಸ್ಪಥಿಯೋನ್ ಎಂಬ ಔಷಧಿಯನ್ನು ಸೊಳ್ಳೆಗಳ ನಿವಾರಣೆಗಾಗಿ ಸಿಂಪಡಿಸಿರುವುದು ಹಾಗೂ ತಾ. 28-11-79 ರಂದು 100 ಕೆ.ಜಿ. ಬಿ. ಹೆಚ್. ಸಿ. ಪೌಡರನ್ನು ಸಹಾ ಸಿಂಪಡಿಸಿರುವುದು ಶ್ಲಾಘನೀಯ. ಈ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ನಗರ ಜನತೆಯ ಸಂಪೂರ್ಣ ಬೆಂಬಲವಿದೆ.

ಜನಗಳ ಸಮಸ್ಯೆಗಳ ಬಗ್ಗೆ ಅಸಡ್ಡೆ ತೋರುವ ಪುರಸಭೆ ಸದಸ್ಯರು ಹಾಗೂ ಅಧ್ಯಕ್ಷರು ಈ ಕೂಡಲೇ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸುತ್ತೇವೆ.

ಜಿ. ಎನ್. ಸೂರ್ಯಪ್ರಕಾಶ್
ಹೆಚ್. ಪಿ. ನಾಗರಾಜು
ಅಲಂಕಾರ್ ಟೈಲರ್ಸ್
ಶಿಡ್ಲಘಟ್ಟ

ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲ

ಚಿಕ್ಕಬಳ್ಳಾಪುರದಲ್ಲಿ ಪ್ರತಿಭಟನಾ ಮೆರವಣಿಗೆ

ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರದಲ್ಲಿ ತಾ. 3-12-79 ರಂದು ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಲು ಸಿ.ಐ.ಟಿ.ಯು. ಕರೆಯ ಮೇರೆಗೆ ಚಿಕ್ಕಬಳ್ಳಾಪುರದ ರೈತ ಕಾರ್ಮಿಕರು, ರೇಷ್ಮೆ ಕಾರ್ಮಿಕರು ಸುಮಾರು ಐನೂರು ಜನ ಕಾಂ.ಎಸ್. ಲಕ್ಷ್ಮಯ್ಯ.ಕಾಂತರಾಜ್, ವಿ ರಾಮಯ್ಯ ಕೃಷ್ಣಪ್ಪ. ಶ್ರೀಮತಿ ನಂಜಮ್ಮ ಹಾಗೂ ಚಿನ್ನಮ್ಮ ಇವರ ನಾಯಕತ್ವದಲ್ಲಿ ಮೆರವಣಿಗೆ ನಡೆಸಿದರು. ನಂತರ ಬೆಳಿಗ್ಗೆ 10-30ರಿಂದ ಸಾಯಂಕಾಲ 5-30 ರ ವರೆಗೆ ಉಪ-ವಿಭಾಗಾಧಿಕಾರಿಗಳ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

ನಂತರ, ಸಭೆಯನ್ನುದ್ದೇಶಿಸಿ ರೈತ, ಕಾರ್ಮಿಕರ ಮುಖಂಡರಾದ ಕಾಂ. ಎಸ್. ಲಕ್ಷ್ಮಯ್ಯನವರು ಮೈಕೋ ಕಾರ್ಮಿಕರ ಹೋರಾಟವನ್ನು ವಿವರಿಸಿದರಲ್ಲದೆ. ಆಡಳಿತ ವರ್ಗದ ಗೂಂಡಾಗಳು ಕಾರ್ಮಿಕ ಮುಖಂಡರ ಮೇಲೆ ನಡೆಸುತ್ತಿರುವ ಧಾಳಿಯನ್ನು ಖಂಡಿಸಿದರು. ಸರ್ಕಾರ ಕೂಡಲೇ ಮಧ್ಯೆ ಪ್ರವೇಶ ಮಾಡಿ ಹೋರಾಟವನ್ನು ಇತ್ಯರ್ಥಪಡಿಸಬೇಕೆಂದು ಒತ್ತಾಯಿಸಿ ಎರಡು ಸಾವಿರ ಜನರ ಸಹಿ ಇರುವ ಮನವಿಯನ್ನು ಉಪ ವಿಭಾಗಾಧಿಕಾರಿಗಳ ಮೂಲಕ ಸರಕಾರಕ್ಕೆ ಕಳುಹಿಸಲಾಯಿತು.

ಶ್ರದ್ಧಾಂಜಲಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಸರಗೋಡು ತಾಲ್ಲೂಕು, ಕೊಡ್ಲಮೊಗರು ಶಾಖೆಯ ಹಿರಿಯ ಕಾರ್ಯಕರ್ತರಾದ ದಿವಂಗತ ತನಿಯ ಭಂಡಾರಿಯವರು ತಮ್ಮ 70ನೇ ವರ್ಷ ಪ್ರಾಯದಲ್ಲಿ ತಾ. 30-11-79ನೇ ಶುಕ್ರವಾರ ಆಕಸ್ಮಿಕವಾಗಿ ಹೃದಯಾಘಾತದಿಂದಾಗಿ ನಿಧನ ಹೊಂದಿದರು. ಶ್ರೀಯುತರುಕೊಡ್ಲಮೊಗರು ಗ್ರಾಮದ ಶ್ರಮಜೀವಿಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಅವರ ಮಗ ಶ್ರೀ ಉಮೇಶ್ ಭಂಡಾರಿಯವರು ದಕ್ಷಿಣ ಕನ್ನಡ ಜಿಲ್ಲೆಯ ಎಸ್. ಎಫ್. ಐ. ಕಾರ್ಯಕರ್ತರಾಗಿದ್ದಾರೆ.

ಮೃತರ ಅಂತ್ಯಕ್ರಿಯೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಜಾರಪ್ಪಶೆಟ್ಟಿ, ಕಾಂ. ಪಕ್ಕೀರಶೆಟ್ಟಿಗಾರ ಮತ್ತು ಕೆ.ಎಸ್.ವೈ.ಎಫ್. ಬ್ಲೋಕ್ ಕಾರ್ಯದರ್ಶಿ ಕಾಂ. ಚಂದ್ರಹಾಸಶೆಟ್ಟಿ ಮುಂತಾದವರು ಭಾಗವಹಿಸಿದ್ದರು.

ದಿವಂಗತರ ನಿಧನದಿಂದ ಶೋಕತಪ್ತರಾದ ಅವರ ಕುಟುಂಬದೊಂದಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಂಜೇಶ್ವರ ಲೋಕಲ್ ಕಮಿಟಿಯೂ ಭಾಗಿಯಾಗಿದೆ.

ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ

ಶಿಡ್ಲಘಟ್ಟದಲ್ಲಿ ಮೆರವಣಿಗೆ, ಸತ್ಯಾಗ್ರಹ

ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್, ಶಿಡ್ಲಘಟ್ಟ ಶಾಖೆಯ ವತಿಯಿಂದ ತಾ. 3-12-79 ರಂದು ಶಿಡ್ಲಘಟ್ಟ ತಾಲ್ಲೂಕು ಕಛೇರಿ ಎದುರು ಕಾಂ. ಎಂ. ಎನ್. ವೆಂಕಟರಮಣಪ್ಪ-ಅಧ್ಯಕ್ಷರು, ಕಾಂ. ಎನ್. ಮಣಿ ಕಾರ್ಯದರ್ಶಿಗಳ ನಾಯಕತ್ವದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5-30ರವರೆಗೆ "ಧರಣಿ ಸತ್ಯಾಗ್ರಹ" ನಡೆಯಿತು. ಸತ್ಯಾಗ್ರಹದಲ್ಲಿ ಒಂದು ನೂರು ಜನ ಕಾರ್ಯಕರ್ತರು ಭಾಗವಹಿಸಿದ್ದರು.

ಮೈಕೋ ಕಾರ್ಮಿಕ ಹೋರಾಟದ ಬೆಂಬಲಾರ್ಥವಾಗಿ ನಡೆದ ಸತ್ಯಾಗ್ರಹ ಯಶಸ್ವಿಯಾಗಲೆಂದು, ಸ್ಟೇಟ್ ಬ್ಯಾಂಕ್ ನೌಕರರ ಯೂನಿಯನ್, ವಿದ್ಯುಚ್ಛಕ್ತಿ ನೌಕರರ ಸಂಘ, ಸರಕಾರಿ ನೌಕರರ ಸಂಘದ ಪ್ರತಿನಿಧಿಗಳು ಸತ್ಯಾಗ್ರಹಿಗಳನ್ನು ಭೇಟಿಮಾಡಿ ಬೆಂಬಲ ಸೂಚಿಸಿದರು.

ಸಂಜೆ 5 ಗಂಟೆಗೆ ಕಾಂ. ಎಂ.ಎನ್. ವೆಂಕಟರಮಣಪ್ಪ, ಎನ್.ಮಣಿ,ಆರ್. ಮುನಿಯಪ್ಪ, ಸಯ್ಯದ್‌ರಫೀಯುಲ್ಲಾ, ಅನಂತ ಪದ್ಮನಾಭರಾವ್ ಮುಂತಾದವರ ನಿಯೋಗವೊಂದು ಒಂದು ಸಾವಿರ ಸಹಿಗಳನ್ನು ಒಳಗೊಂಡ ಮನವಿಯನ್ನು ತಹಸೀಲ್ದಾರರಿಗೆ ಅರ್ಪಿಸಲಾಯಿತು. ತಹಸೀಲ್ದಾರರು ಮನವಿಯನ್ನು ಸರ್ಕಾರಕ್ಕೆ ಕಳಿಸುವುದಾಗಿ ಭರವಸೆ ನೀಡಿದರು. ಊರಿನಲ್ಲಿ ವಾಲ್‌ಪೋಸ್ಟರ್‌ಗಳು ಹಾಗೂ ಸಿನಿಮಾ ಮಂದಿರಗಳಲ್ಲಿ ಸ್ಲೈಡ್‌ಗಳನ್ನು ಹಾಕಿಸುವುದರ ಮೂಲಕ ಜನಗಳಿಗೆ ಮೈಕೋ ಕಾರ್ಮಿಕರ ಸಮಸ್ಯೆಗಳನ್ನು ತಿಳಿಸಲಾಯಿತು. ಧರಣಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಕಾಂ. ಜೆ. ದೊರೆಸ್ವಾಮಿಯವರು ಮಾತನಾಡಿದ ನಂತರ, ಘೋಷಣೆಗಳೊಂದಿಗೆ ಸತ್ಯಾಗ್ರಹ ಮುಕ್ತಾಯವಾಯಿತು.

ಪಕ್ಷದ ಹಿತೈಷಿಗಳ ಸಭೆ

ದ.ಕ.ಜಿಲ್ಲೆ ಬಂಟ್ವಾಳ ತಾಲ್ಲೂಕು ಮೂಡ ಗ್ರಾಮದ ಬಳಿ ಪಲ್ಯ ಎಂಬಲ್ಲಿ ತಾ. 30-11-79ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತೈಷಿಗಳ ಸಭೆ ಕಾಂ. ಬಿ. ಹೆಚ್. ಬಂಗೇರರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಭೆ ಕರೆದ ಉದ್ದೇಶವನ್ನು ವಿವರಿಸಿದ ಕಾಂ. ಬಿ. ಮಂಜುನಾಥ ಸಾಫಲ್ಯ, ರೈತರು, ಕಾರ್ಮಿಕರು, ಮಧ್ಯಮ ವರ್ಗದವರು ಸಂಘಟಿತರಾಗಿ ಬಂಡವಾಳಶಾಹಿ, ಭೂಮಾಲಕ ಪದ್ಧತಿಯ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು.

ನಂತರ, ಸ್ಥಳೀಯ ಸಂಘಟನೆಯನ್ನು ಬಲಪಡಿಸಲು ಸಮಿತಿಯನ್ನು ರಚಿಸಲಾಯಿತು. ಸಮಿತಿಯ ಅಧ್ಯಕ್ಷರಾಗಿ ಕಾಂ. ಎಂ. ಮಹಮ್ಮದ್, ಉಪಾಧ್ಯಕ್ಷ ಟಿ. ಉಸ್ಮಾನ್,ಕಾರ್ಯದರ್ಶಿ-ಇಬ್ರಾಹೀಂ ಜೊತೆ ಕಾರ್ಯದರ್ಶಿ ಮತ್ತು ಮೊಹಮ್ಮದ್, ಸದಸ್ಯರಾಗಿ ಅಬ್ದುಲ್ ಸತ್ತಾರ್, ಸುಲೇಮಾನ್, ಎನ್. ಎ. ರಜಾಕ್, ಬಿ. ಮಹಮ್ಮದ್, ಪಿ. ಮಹಮ್ಮದ್, ಬಿ. ಮಹಮ್ಮದ್, ಒಟ್ಟು ಹನ್ನೊಂದು ಜನ ಸದಸ್ಯರ ಸಮಿತಿಯನ್ನು ರಚಿಸಲಾಯಿತು.

ನಾಗಪಾಲ್ ಎಸ್ಟೇಟ್ ಕಾರ್ಮಿಕನ ಕೊಲೆ

ನಿಷ್ಪಕ್ಷಪಾತ ತನಿಖೆಗೆ ಒತ್ತಾಯ

ತಾ. 24-11-1979 ರಂದು ಮೂಡಿಗೆರೆ ತಾಲ್ಲೂಕು ನಾಗಪಾಲ್ ಎಸ್ಟೇಟಿನ ಕಾರ್ಮಿಕನಾದ ಶಂಭು ಎನ್ನುವವರನ್ನು ತೋಟ ಮಾಲೀಕರಾದ ಶ್ರೀಕಂಠಗೌಡ ಎನ್ನುವವರು ಆತನ ಮೇಲೆ ಕೊಟ್ಟ ದೂರಿನ ಆಧಾರದ ಮೇಲೆ ಇಬ್ಬರು ಪೋಲೀಸ್ ಪೇದೆಗಳು ಬಂದು ಶಂಭುವನ್ನು ಸಾಯುವವರೆಗೂ ಹೊಡೆದು ಕೊಲ್ಲಿಸಿದ ದುರ್ಘಟನೆ ವರದಿಯಾದಂತೆಯೆ ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ನಿ(ಸಿ. ಐ. ಟಿ. ಯು.)ನ ಪದಾಧಿಕಾರಿಗಳು ತಾ॥ 27-11-1979 ರಂದು ಸಭೆ ಸೇರಿ ತಮ್ಮ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

ಪೋಲೀಸರು ಆತನನ್ನು ಸಾಯುವವರೆಗೂ ಹೊಡೆಯಲು ಕಾರಣವೇನು? ಆದುದರಿಂದ ಈ ಕೊಲೆಯ ಬಗ್ಗೆ ನಿಷ್ಪಕ್ಷವಾದ ತನಿಖೆ ನಡೆಸಿ ತಪ್ಪಿತಸ್ಥರನ್ನು ಕಾನೂನು ಪ್ರಕಾರ ಶಿಕ್ಷೆಗೆ ಗುರಿಪಡಿಸಬೇಕೆಂದು ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.) ಸಂಬಂಧಪಟ್ಟ ಅಧಿಕಾರಿಗಳಿಗೆ ಒತ್ತಾಯಪಡಿಸಿದೆ.

ಕಾರ್ಮಿಕರ ಕಲ್ಯಾಣದಬಗ್ಗೆ ಹಗಲು ರಾತ್ರಿ ಮೊಸಳೆ ಕಣ್ಣೀರು ಸುರಿಸುತ್ತಿರುವ ಸರಕಾರ ಸಮಾಜವಾದದ ಬಗ್ಗೆ ಭಾಷಣ ಮಾಡುವ ರಾಜಕೀಯ ಪುಢಾರಿಗಳು ಈ ಘಟನೆಯಿಂದ ತಲೆತಗ್ಗಿಸಬೇಕಾಗಿದೆ. ಇಂತಹ ಘೋರ ಅಕೃತ್ಯಗಳು ಇನ್ನು ಮುಂದೆ ನಡೆಯದಂತೆ ಕಾರ್ಮಿಕರು ಜಾಗೃತರಾಗಬೇಕಾಗಿದೆ. ಕಾರ್ಮಿಕರು ತಮ್ಮ ನ್ಯಾಯವಾದ ಬೇಡಿಕೆಗಳನ್ನಿಟ್ಟಾಗ ಮಾಲೀಕವರ್ಗ ಪೋಲೀಸ್ ಮತ್ತು ಸರಕಾರಿ ಅಧಿಕಾರಿಗಳೊಡನೆ ಶಾಮೀಲಾಗಿ ಕಾರ್ಮಿಕರನ್ನೆ ತಪ್ಪುಗಾರರನ್ನಾಗಿ ಮಾಡುವ ಷಡ್ಯಂತ್ರ ಸರ್ವೆಸಾಮಾನ್ಯವಾಗಿದೆ. ಆದುದರಿಂದ ಎಲ್ಲಾ ಕಾರ್ಮಿಕರು, ರೈತರು, ದೀನದಲಿತರು ಸಂಘಟಿತರಾಗಿ ಇಂತಹವುಗಳವಿರುದ್ಧ ಸೆಟೆದುನಿಂತು ಹೋರಾಟ ಮಾಡುವುದರ ಅವಶ್ಯಕತೆಯನ್ನು ಕಾಣುತ್ತಿದ್ದೇವೆ. ಅನ್ಯಾಯದ ವಿರುದ್ಧ ಒಗ್ಗಟ್ಟಾಗಿ ನಿಂತಾಗಲೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವೆಂಬುದನ್ನು ಕಾರ್ಮಿಕರು ಮನಗಾಣಬೇಕೆಂದು ಸಂಘವು ಎಲ್ಲಾ ದುಡಿಯುವ ವರ್ಗವನ್ನು ಕೇಳಿಕೊಂಡಿದೆ.

ಈ ಘಟನೆಗೆ ಸಂಬಂಧಪಟ್ಟ ಹಾಗೆ ಯಾವುದೇ ರೀತಿಯ ನಿಷ್ಕ್ರಿಯತೆ ಕಂಡುಬಂದಲ್ಲಿ ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳೊಂದಿಗೆ ಕೂಡಿಕೊಂಡು ನಮ್ಮ ಕಾರ್ಮಿಕ ಸಂಘವು ಹೋರಾಟಕ್ಕೆ ಅಣಿಯಾಗಬೇಕಾಗಬಹುದೆಂದು ಸರಕಾರವನ್ನು ಎಚ್ಚರಿಸಿದೆ.

○

ರೈತ ಕಾರ್ಯಕರ್ತರ ಸಭೆ

ತಾ. 30-11-79 ರಂದು ಬೆಂಗಳೂರು ಜಿಲ್ಲಾ, ದೊಡ್ಡಬಳ್ಳಾಪುರದಲ್ಲಿ ರೈತ ಕಾರ್ಯಕರ್ತರ ಸಭೆ ನಡೆಯಿತು. ರೈತಸಂಘದ ಜಿಲ್ಲಾ ಅಧ್ಯಕ್ಷ ಕಾಂ. ಸಿ ರಾಮಭದ್ರಯ್ಯನವರು ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಸಂಘಟನೆಯ ಮಹತ್ವವನ್ನು ವಿವರಿಸಿದರು. ಅನೇಕ ರೈತರು ತಾಲ್ಲೂಕಿನ ಸಮಸ್ಯೆಗಳನ್ನು ಚರ್ಚಿಸಿದರು. ಮುಖ್ಯವಾಗಿ ದೊಡ್ಡ ಬೆಳವಂಗಲ ಹೋಬಳಿಯ ಶೇಕ್‌ದಾರರು ಬಗ್ಗರ್ ಹುಕುಂ ಸಾಗುವಳಿ ಮತ್ತು ದರಖಾಸ್ತು ಅರ್ಜಿಗಳ ಬಗ್ಗೆ ಸಾಗುವಳಿ ಚೀಟಿಗಳನ್ನು ಕೊಡಲು ಲಂಚಕ್ಕಾಗಿ ರೈತರನ್ನು ಪೀಡಿಸುತ್ತಿರುವುದು ಹಾಗೂ ಆದಾಯ ಸರ್ಟಿಫಿಕೇಟ್ ಕೊಡಲು ಕಂದಾಯ ಇಲಾಖೆ ಅಧಿಕಾರಿಗಳು ಹಣ ಕೀಳುತ್ತಿರುವುದನ್ನು ಚರ್ಚಿಸಿದ ಸಭೆ, ನಂತರ ಈ ಬಗ್ಗೆ ತಹಸೀಲ್ದಾರರಿಗೆ ಮನವಿಯನ್ನು ಅರ್ಪಿಸಿತು. ತಾಲ್ಲೂಕಿನಲ್ಲಿ ವ್ಯಾಪಕ ಸಂಘಟನೆ ಮತ್ತು ಸಮ್ಮೇಳನ ನಡೆಸಲು ಒಂದು ತಾತ್ಕಾಲಿಕ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು, ಸಮಿತಿಯ ಅಧ್ಯಕ್ಷರಾಗಿ ಮುತ್ತುನರಸಯ್ಯನವರನ್ನು ಸರ್ವಾನುಮತದಿಂದ ಆಯ್ಕೆಮಾಡಲಾಯಿತು. ಸಭೆಯನ್ನು ಉದ್ದೇಶಿಸಿ, ರಾಜ್ಯ ರೈತ ಸಂಘದ ಅಧ್ಯಕ್ಷ ಕಾಂ.ಮುಗುವಾಳಪ್ಪ, ಸಿ. ವೀರಣ್ಣ. ಪಿ. ಗಂಗಭೈರಪ್ಪ, ಕೃಷ್ಣಮೂರ್ತಿ ಮುಂತಾದವರು ಮಾತನಾಡಿದರು. ಎಸ್. ಎಫ್. ಐ. ಕಾರ್ಯಕರ್ತ ಕಾಂ. ಈಶ್ವರಯ್ಯ ಕ್ರಾಂತಿಗೀತೆಗಳನ್ನು ಹಾಡಿದ ನಂತರ ಸಭೆ ಮುಕ್ತಾಯವಾಯಿತು. ●

ಕುದುರೆಮುಖದಲ್ಲಿ ಬಹಿರಂಗ ಸಭೆ

ತಾ. 19.11.1979 ರಂದು ಎಚ್.ಎನ್.ಸಿ.ಎಲ್. ಎಂಪ್ಲಾಯೀಸ್ ಅಸೋಸಿಯೇಶನ್ (ಸಿ.ಐ.ಟಿ.ಯು.) ವಿನ ಆಶ್ರಯದಲ್ಲಿ ಕುದುರೆಮುಖದಲ್ಲಿ ಬಹಿರಂಗ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ. ಯು. ವಿನ ಕರ್ನಾಟಕ ರಾಜ್ಯಸಮಿತಿಯ ಸದಸ್ಯರು ಹಾಗೂ ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್‌ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷರಾದ ಕಾಮ್ರೇಡ್ ಎ.ಸಿ. ಕೇಶವರು ವಹಿಸಿದ್ದರು. ಮೊದಲು ಎಚ್.ಎಸ್.ಸಿ.ಎಲ್. ಎಂಪ್ಲಾಯೀಸ್ ಅಸೋಸಿಯೇಶನ್‌ನ ಅಧ್ಯಕ್ಷರಾದ ಕಾಂ ·ಕೆ. ರಾಮದಾಸ್‌ಆಚಾರ್ ಎಲ್ಲರನ್ನು ಸ್ವಾಗತಿಸಿದರು.

ಸಭೆಯನ್ನು ಉದ್ದೇಶಿಸಿ ಕರ್ನಾಟಕ ರಾಜ್ಯದ ಸಿ.ಐ.ಟಿ.ಯು.ವಿನ ಪ್ರಧಾನ ಕಾರ್ಯದರ್ಶಿ ಯವರಾದ ಕಾಂ. ಸಿ. ನಂಜುಂಡಪ್ಪನವರು ಸಿ ಐ.ಟಿ ಯು.ವಿನ ಧ್ಯೇಯ ಧೋರಣೆ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಎಚ್.ಎಸ್.ಸಿ.ಎಲ್. ಕಾರ್ಮಿಕರಿಗೆ ಉಕ್ಕಿನ ಉದ್ದಿಮೆಯಲ್ಲಿ ದುಡಿಯುವ ಕಾರ್ಮಿಕರಿಗೆ ಸಿಗುವಷ್ಟೆ ವೇತನ ಸಿಗಬೇಕೆಂದು, ಕನ್‌ಸ್ಟ್ರಕ್ಷನ್ ಕೆಲಸಗಳು ಮುಗಿದ ತಕ್ಷಣ ಕಾರ್ಮಿಕರನ್ನು ವಜಾಮಾಡದೆ ಎಚ್. ಎಸ್.ಸಿ.ಎಲ್. ನಿರ್ವಹಿಸುತ್ತಿರುವ ಕಾರ್ಖಾನೆ ಮತ್ತು ಗಣಿಗಳಲ್ಲಿಯೆ ಕೆಲಸ ಕೊಡಬೇಕೆಂದು, ಎಚ್.ಎಸ್.ಸಿ.ಎಲ್. ಕೆಲಸಗಳನ್ನು ಖಾಸಗಿ ಸಂಸ್ಥೆಗಳಿಗೆ ಕಂಟ್ರಾಕ್ಟ್ ಮತ್ತು ಸಬ್‌ಕಂಟ್ರಾಕ್ಟ್ ಆಧಾರದಲ್ಲಿ ಕೊಡುವುದನ್ನು ನಿಲ್ಲಿಸಬೇಕೆಂಬುದು ಸಿ.ಐ ಟಿ.ಯು.ವಿನ ಬೇಡಿಕೆಗಳಾಗಿವೆಯೆಂದು, ಈ ಬೇಡಿಕೆಗಳ ಈಡೇರಿಕೆಗಾಗಿ ಎಲ್ಲಾ ಸಂಘಟನೆಗಳೊಂದಿಗೆ ಕೂಡಿ ಸಂಯುಕ್ತ ಹೋರಾಟ ಮಾಡಬೇಕಾಗಬಹುದೆಂದು ಹೇಳಿದರು.

ತಾ. 30-10-1979 ರಂದು ಸಿ. ಐ. ಟಿ. ಯು. ವಿಗೆ ಸೇರಿದ ಸದಸ್ಯರ ಮೇಲೆ ಮಾಲೀಕವರ್ಗದ ಏಜೆಂಟರಾಗಿ ಬಿ. ಎಂ. ಎಸ್. ಯೂನಿಯನ್ನಿನವರು ಹಲ್ಲೆಮಾಡಿದ್ದನ್ನು, ತಪ್ಪಿತಸ್ಥರನ್ನು ಶಿಕ್ಷಿಸದೆ ಸಿ. ಐ. ಟಿ. ಯು. ವಿನ ಸದಸ್ಯರ ಮೇಲೆಯೇ ಪೋಲೀಸರು ದುಂಡಾವರ್ತಿಯನ್ನು ಪ್ರದರ್ಶಿಸಿ, ಲಾಠಿಚಾರ್ಜು ಮಾಡಿ ಹಲವಾರು ಜನರನ್ನು ಬಂಧಿಸಿರುವ ಪೋಲೀಸರ ವರ್ತನೆಯನ್ನು ಬಲವಾಗಿ ಖಂಡಿಸಿದರು.

ಕಳೆದ 3 ದಿನಗಳಿಂದ ಇಲ್ಲಿಯ ಇ. ಸಿ. ಸಿ. ಕೆಲಸಗಾರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ನಡೆಸುತ್ತಿರುವ ಮುಷ್ಕರಕ್ಕೆ ಎಲ್ಲಾ ಕಾರ್ಮಿಕರು ಬೆಂಬಲ ಕೊಡಬೇಕೆಂದು ಕೇಳಿಕೊಂಡರು. ಅವರ ಬೆಂಬಲಾರ್ಥವಾಗಿ ತಾ. 19-11-1979 ರಂದು ಹೆಚ್. ಎಸ್. ಸಿ. ಎಲ್. ಕಾರ್ಮಿಕರು ಸಾಂಕೇತಿಕ ಮುಷ್ಕರ ಮಾಡಿದ್ದನ್ನು ಅಭಿನಂದಿಸಿದರು.

ರಾಜ್ಯದ ಹಲವಾರು ಕಡೆಗಳಲ್ಲಿ ಸಿ. ಐ ಟಿ. ಯು. ವಿನ ನೇತೃತ್ವದಲ್ಲಿ ನಡೆಯುತ್ತಿರುವ ಹೋರಾಟವನ್ನು ಮಾಲೀಕವರ್ಗ ಪೋಲೀಸರ ಸಹಾಯದಿಂದ ಬಗ್ಗುಬಡಿಯುವ ಪ್ರಯತ್ನವನ್ನು ಖಂಡಿಸಿದರಲ್ಲದೆ, ಬೆಂಗಳೂರಿನ ಮೈಕೋಕಾರ್ಮಿಕರ ಹಾಗೂ ದಾಂಡೇಲಿಯ ಎಲೆಕ್ಟ್ರೋ ಮೆಟಲರ್ಜಿಕಲ್ ಕಾರ್ಮಿಕರ ಮುಷ್ಕರಗಳಿಗೆ ಇಡೀ ಕಾರ್ಮಿಕವರ್ಗ ಒಗ್ಗಟ್ಟಾಗಿ ಬೆಂಬಲ ಸೂಚಿಸಬೇಕೆಂದು ಕೇಳಿಕೊಂಡರು.

ಎಚ್. ಎಸ್. ಸಿ. ಎಲ್. ಅಖಿಲ ಭಾರತ ಸಮನ್ವಯ ಸಮಿತಿಯ ಸದಸ್ಯರಾದ ಭಿಲಾಯಿಯ ಕಾಂ. ಪ್ರೇಮರಾಜನ್ ಮಾತನಾಡಿ ಕಾರ್ಮಿಕರು ಒಗ್ಗಟ್ಟಾಗಿ ಸಿ. ಐ. ಟಿ. ಯು. ವನ್ನು ಬಲಪಡಿಸಬೇಕೆಂದು ಕೇಳಿಕೊಂಡರು. ಭಿಲಾಯಿ ಕಾರ್ಮಿಕರ ಸೌಹಾರ್ದ ಬೆಂಬಲವನ್ನು ಸೂಚಿಸಿ ಮಾಲೀಕವರ್ಗ ಪೋಲೀಸರು ಕಾರ್ಮಿಕರ ಮೇಲೆ ದಬ್ಬಾಳಿಕೆಯನ್ನು ನಡೆಸಿದರೂ, ಕಾರ್ಮಿಕವರ್ಗದ ಕ್ರಾಂತಿಕಾರಕ ಜಾಗೃತಿಯನ್ನು ನಾಶಗೊಳಿಸಲಾರರೆಂದು, ಎಚ್. ಎಸ್. ಸಿ. ಎಲ್. ಕಾರ್ಮಿಕರ ಮೇಲೆ ನಡೆಯುವ ಅನ್ಯಾಯವನ್ನು ಒಂದಾಗಿ ಎದುರಿಸುವಾ ಎಂದು ಹೇಳಿದರು.

ಸಭೆಯು ಒಮ್ಮತದಿಂದ ಮೈಕೋ ಕಾರ್ಮಿಕರಿಗೆ ಬೆಂಬಲ ಸೂಚಿಸಿ, ಸರಕಾರ ಕೂಡಲೆ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಪ್ರಯತ್ನಿಸಬೇಕೆಂದು ಒತ್ತಾಯಪಡಿಸಿ ಗೊತ್ತುವಳಿಯನ್ನು ಸ್ವೀಕರಿಸಿತು. ಇದರ ಪ್ರತಿಗಳನ್ನು ಕರ್ನಾಟಕ ರಾಜ್ಯ ಮುಖ್ಯಮಂತ್ರಿ, ಲೇಬರ್ ಕಮೀಶನರ್, ಮೈಕೋ ಮ್ಯಾನೇಜರ್ ಮತ್ತು ಸಿ. ಐ. ಟಿ. ಯು ರಾಜ್ಯಸಮಿತಿಗಳಿಗೆ ಕಳುಹಿಸಿಕೊಡಬೇಕೆಂದು ತೀರ್ಮಾನಿಸಿತು. ○

ಬೀಡಿ ಕೆಲಸಗಾರರಿಗೆ ವಾರವಿಡೀ ಕೆಲಸ ಕೊಡಲು ಒತ್ತಾಯ

ತಾ.30.11.79 ರಂದು ಸಂಜೆ ಘಂಟೆ 5ಕ್ಕೆ ಸೇರಿದ ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯಕರ್ತರ ಸಭೆಯಲ್ಲಿ ಬೀಡಿ ಕೆಲಸಗಾರರಿಗೆ ಈಗ ವಾರಕ್ಕೆ 3ದಿನ ಮಾತ್ರ ಕೆಲಸ ಸಿಗುತ್ತಿದೆ, ಇದರ ಬದಲಿಗೆ ವಾರದಲ್ಲಿ ಆರುದಿನದ ಕೆಲಸ ಸಿಗಬೇಕು. ತಪ್ಪಿದಲ್ಲಿ ಕೆಲಸವಿಲ್ಲದ ದಿನದ ಪರಿಹಾರಸಿಗಬೇಕು. ಈಬಗ್ಗೆ ಎಲ್ಲಾ ಬೀಡಿ ಕಾರ್ಮಿಕರು ಸಂಘಟಿತರಾಗಿ ತಾ.10.12.79ರಂದು ಮತಪ್ರದರ್ಶನ ನಡೆಸಬೇಕೆಂದು ಸರ್ವಾನುಮತದಿಂದ ತೀರ್ಮಾನವಾಯ್ತು.

ಅಲ್ಲದೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಯನ್ನು ಚುನಾಯಿಸಲು ಎಲ್ಲಾ ಬೀಡಿ ಕಾರ್ಮಿಕರು ಸರ್ವರೀತಿಯ ಸಹಾಯ ಸಹಕಾರ ವನ್ನೀಯಬೇಕೆಂದು ತೀರ್ಮಾನವಾಯ್ತು.

ಈ ಸಭೆಯಲ್ಲಿ ಕಾಂ. ಪಿ. ರಾಮಚಂದ್ರರಾವ್, ಕಾಂ. ಲೋಕಯ್ಯಶೆಟ್ಟಿ ಮತ್ತು ಕಾಂ. ಕಮಲಾಕ್ಷಬಂಗೇರರವರು ಮೇಲಿನ ವಿಷಯಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿ ಮಾತಾಡಿದರು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಎ.ಕೆ. ನಾರಾಯಣರು ವಹಿಸಿದ್ದರು. ಕಾಂ. ಜೆ ವೀರಪ್ಪನವರು ಸಭೆಯನ್ನು ಸ್ವಾಗತಿಸಿ ಮಾತಾಡಿದರು. ○

ರೈತರ ಸಮಸ್ಯೆಗಳಿಗೆ ಹೋರಾಟವೇ ಪರಿಹಾರ

ಉ.ಕ. ಜಿಲ್ಲೆ, ಕಾರವಾರ ತಾಲ್ಲೂಕಿನ ಮಲ್ಲಾಪುರ ಗ್ರಾಮದಲ್ಲಿ ದಿ. 27.11.79 ರಂದು ರಾತ್ರಿ 8.00 ಘಂಟೆಗೆ ರೈತರ ಸಭೆ ಸೇರಿತ್ತು. ರೈತರು ಸಭೆಯಲ್ಲಿ ತಮ್ಮ ಗ್ರಾಮಕ್ಕೆ ಕುಡಿಯುವ ನೀರಿನ ಮತ್ತು ವೈದ್ಯಕೀಯ ಸವಲತ್ತಿಲ್ಲವೆಂದು ಹೇಳಿದರು. ರೈತರ ಚರ್ಚೆಯ ನಂತರ ಕಾಂ. ಬಾಬೂರಾವ್ ಮತ್ತು ಕಾಂ. ಸಮಿಉಲ್ಲಾ ಮಾತನಾಡಿದರು. ಸಮಸ್ಯೆಗಳು ಉದ್ಭವಿಸಲು ಸರಕಾರದ ಬಂಡವಾಳಶಾಹಿ ಧೋರಣೆಯೇ ಕಾರಣ. ರೈತರ ಸಂಘಟನೆಯೇ ಮುಂದಿನ ಗುರಿಯಾಗಿಟ್ಟು ಸಂಘವನ್ನು ಬಲಪಡಿಸಿ ಸಮಸ್ಯೆಗಳನ್ನು ಪರಿಹರಿಸಲು ಹೋರಾಡದೇ ಗತ್ಯಂತರವಿಲ್ಲ. ರೈತರ ಹೋರಾಟಕ್ಕೆ ನೇತೃತ್ವವಹಿಸಲು 'ಉತ್ತರ ಕನ್ನಡ ಜಿಲ್ಲಾ ಕಿಸಾನ್ ಸಭಾ' ಸದಾಸಿದ್ಧವಾಗಿದೆಯೆಂದು ಕಾಂ. ಸಮಿಉಲ್ಲಾರವರು ಧೃಡವಾಗಿ ನುಡಿದರು.

ವೈದ್ಯರ ಅಲಕ್ಷ್ಯ ಗರ್ಭಿಣಿಯ ಸಾವು

ಹಾಸನ ಜಿಲ್ಲೆ, ಸಕಲೇಶಪುರದ ಸರಕಾರಿ ಆಸ್ಪತ್ರೆಯಲ್ಲಿ ತಾ. 26-11-79ರಂದು ಕೊಲಾಸೊ ಮಟ ಸಾಗರ ತೋಟದ ಕಾರ್ಮಿಕಳಾದ ದೇಸಿಲುಯೆಂಬ ಗರ್ಭಿಣಿಯೊಬ್ಬಳು ವೈದ್ಯರ ಮತ್ತು ಸಿಬ್ಬಂದಿ ವರ್ಗದ ನಿರ್ಲಕ್ಷ ಮತ್ತು ಉದಾಸೀನತೆಯಿಂದ ಸಾವನ್ನಪ್ಪಬೇಕಾಯಿತು. ಅಂತರರಾಷ್ಟ್ರೀಯ ಮಹಿಳಾ ' ವರ್ಷವನ್ನು ಆಚರಿಸಿ ಮಕ್ಕಳ ವರ್ಷವನ್ನು ದೊಡ್ಡ ಪ್ರಚಾರದೊಂದಿಗೆ ಆಚರಿಸುತ್ತಿರುವ ಸಂದರ್ಭದಲ್ಲಿ ಇದರ ಪ್ರಯೋಜನ ಬಡಮಕ್ಕಳಿಗೆ ಮತ್ತು ಅವರ ತಾಯಂದಿರಿಗೆ ಯಾವ ರೀತಿ ದೊರೆಯುತ್ತಿದೆ ಎಂಬುದಕ್ಕೆ ಈ ಘಟನೆ ಒಂದು ಜೀವಂತ ನಿದರ್ಶನ. ಆಸ್ಪತ್ರೆಯಲ್ಲಿ ಕಾರ್ಮಿಕರು ಮತ್ತು ಸಾಮಾನ್ಯ ಜನರು ಹೋದರೆ ಅವರನ್ನು ನೋಡಿಕೊಳ್ಳುವ ರೀತಿಯಿಂದಾಗಿ ಅವರ ಕಾಯಿಲೆ ವಾಸಿಯಾಗುವುದರ ಬದಲು ಉಲ್ಬಣಗೊಂಡು ಸಾವಿಗೀಡಾಗುವುದು ಅನಿವಾರ್ಯವಾಗಿದೆ.

ವೈದ್ಯರ ಮತ್ತು ಸಿಬ್ಬಂದಿಯ ಈ ವರ್ತನೆ ಖಂಡನೀಯ. ಈ ಘಟನೆಯ ಬಗ್ಗೆ ಸರಕಾರದ ಸಂಬಂಧಪಟ್ಟ ಮೇಲಧಿಕಾರಿಗಳು ತನಿಖೆ ನಡೆಸಬೇಕೆಂದು, ಆಸ್ಪತ್ರೆಗಳ ಗುಣಮಟ್ಟ ಸರಿಪಡಿಸಿ ಜನಸಾಮಾನ್ಯರಿಗೆ ವೈದ್ಯಕೀಯ ಸೌಲಭ್ಯ ಕೈಗೆಟಕುವಂತೆ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಕಲೇಶಪುರ ಶಾಖೆ ಮುಖಂಡ ಕಾಂ. ಸುಕುಮಾರ್ ಒತ್ತಾಯಿಸಿದ್ದಾರೆ.

ಇಂತಹ ಘಟನೆ. ಅನ್ಯಾಯಗಳ ವಿರುದ್ಧ ಸಮಾಜದ ದುರ್ಬಲ ವರ್ಗದ ಜನತೆ ಹಾಗೂ ಜನಸಾಮಾನ್ಯರು ಸಾಮೂಹಿಕವಾಗಿ ಸಿಡಿದೆದ್ದು ಪ್ರತಿಭಟಿಸಬೇಕು. ಹಾಗೂ ತಮ್ಮ ಹಿತರಕ್ಷಣೆಗೆ ತಾವೇ ಮುಂದಾಗಬೇಕೆಂದು ಕರ್ನಾಟಕ ತೋಟ ಕಾರ್ಮಿಕರ ಸಂಘ, ಸಕಲೇಶಪುರ ಶಾಖೆ ಕರೆಕೊಟ್ಟಿದೆ.

○

ಅಧಿಕಾರ ಉಳಿಸಿಕೊಳ್ಳಲು ಕೇರಳದ ಆಳುವ ಪಕ್ಷಗಳ ಪರದಾಟ

ಸಿ. ಹೆಚ್. ಮಹಮ್ಮದ್ ಕೋಯಾ ಅವರ ನೇತೃತ್ವದ ಕೇರಳ ಸರಕಾರ ಹುಟ್ಟುವಾಗಲೇ ಲೆಕ್ಕಾಚಾರ ತಪ್ಪಿ ಹುಟ್ಟಿದೆ. ಸಂಪುಟ ರಚನೆಯಾದಾಗ ಅದಕ್ಕಿದ್ದುದು ಮುಸ್ಲಿಂ ಲೀಗ್, ಪಿ. ಎಸ್. ಪಿ. ಮತ್ತು ನಾಯರ್ ಸರ್ವೀಸ್ ಸೊಸೈಟಿಯ ರಾಜಕೀಯ ಪಕ್ಷವಾಗಿರುವ ನ್ಯಾಶನಲ್ ಡೆಮಾಕ್ರಟಿಕ್ ಪಾರ್ಟಿ - ಈ ಮೂರು ಪಕ್ಷಗಳ ಒಟ್ಟು 15 ಸದಸ್ಯರ ಬೆಂಬಲ ಮಾತ್ರ.

ಈ ಸಂಪುಟ ರಚನೆಗೆ ಕಾಂಗ್ರೆಸ್ (ಐ) ಪಕ್ಷದ ಪ್ರೇರೇಪಣೆಯೇ ಮುಖ್ಯ ಕಾರಣವೆನ್ನುವುದು ಕೇರಳದ ಜನತೆಗೆ ಮೊದಲೇ ತಿಳಿದಿದ್ದ ವಿಷಯ. ಇದು ಜನತೆಗೇನೂ ಆಶ್ಚರ್ಯವುಂಟು ಮಾಡಿಲ್ಲ. ಆದರೆ ಎ. ಕೆ. ಅಂಟೋಣಿ ಮುಂದಾಳುತ್ವದ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಈ ಸರಕಾರಕ್ಕೆ ಹೇಗೆ ಬೆಂಬಲ ನೀಡಿತೆನ್ನುವುದೇ ಅವರಿಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಚಿಕ್ಕಮಗಳೂರು ಉಪಚುನಾವಣೆಯ ಸಂದರ್ಭದಲ್ಲಿ ಇದೇ ಎ.ಕೆ. ಅಂಟೋಣಿ ತನ್ನ ಪಕ್ಷದ ಕೇಂದ್ರ ಮುಖಂಡತ್ವವು ಇಂದಿರಾ ಪರ ನಿಲುವೆಯನ್ನು ತಳೆದುದರ ವಿರುದ್ಧ ಪ್ರತಿಭಟಿಸಿ ಮಂತ್ರಿ ಪದವಿಗೆ ರಾಜೀನಾಮೆಯಿತ್ತವರು. ಆಮೇಲೂ ಸಹ ನಿರಂಕುಶಾಧಿಕಾರವನ್ನೂ ಕೋಮುವಾದವನ್ನೂ ಪರಿಣಾಮಕಾರಿಯಾಗಿ ಎದುರಿಸುವ ಉದ್ದೇಶದಿಂದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದಾಗಬೇಕೆಂದು ಅವರು ಬಲವಾಗಿ ಪ್ರತಿಪಾದಿಸಿದವರು. ಕೇರಳದ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಕಾಲದಲ್ಲಿ ಎಲ್ಲ ಕಡೆ ಅಲ್ಲದಿದ್ದರೂ ಹೆಚ್ಚಿನ ಕಡೆ ಸಿ. ಪಿ. ಐ. (ಎಂ) ಮತ್ತು ಆರ್. ಎಸ್. ಪಿ. ಜೊತೆಗೆ ಅಂಟೋಣಿ ಕಾಂಗ್ರೆಸ್ ಚುನಾವಣಾ ಹೊಂದಾಣಿಕೆಯನ್ನೂ ಮಾಡಿಕೊಂಡಿತ್ತು. ವಿಧಾನ ಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆಗಳನ್ನು ನಡೆಸಬೇಕೆಂಬ ಸಿ. ಪಿ. ಐ. ಮುಂದಾಳುತ್ವದ ಆಳುವ ರಂಗದ ಸಂಯುಕ್ತ ಹೇಳಿಕೆಗೆ ಸಹಿಹಾಕಿದ ಪಕ್ಷಗಳಲ್ಲಿ ಅಂಟೋಣಿ ಕಾಂಗ್ರೆಸ್ ಕೂಡಾ ಸೇರಿದೆ. ಇಂತಹ ಪಕ್ಷವೊಂದು ಇಂದಿರಾ ಕಾಂಗ್ರೆಸ್‌ನ ಸರ್ವಾಧಿಕಾರ ಮತ್ತು ಆರೆಸ್ಸೆಸ್-ಜನಸಂಘದ ಕಪಿಮುಷ್ಟಿಯಲ್ಲಿರುವ ಜನತಾ ಪಕ್ಷದ ವಿರುದ್ಧ ಎಡ ಮತ್ತು ಇತರ ಪ್ರಜಾಸತ್ತಾತ್ಮಕ ಪಕ್ಷಗಳೊಂದಿಗೆ ಸೇರಿ ಚುನಾವಣೆಯಲ್ಲಿ ಹೋರಾಡಬೇಕೆಂಬ ತಮ್ಮ ಪಕ್ಷದ ರಾಷ್ಟ್ರೀಯ ನಿಲುವೆಯನ್ನು ಕೈಬಿಟ್ಟದ್ದೇಕೆ ? ಇದೇ ಉದ್ದೇಶಕ್ಕಾಗಿ ಲೋಕದಳದೊಂದಿಗೆ ಮೈತ್ರಿ ಮಾಡಿಕೊಳ್ಳಬೇಕೆಂಬ ತಮ್ಮ ಪಕ್ಷದ ಅಂಗೀಕೃತಧೋರಣೆಯನ್ನು ಅಂಟೋಣಿ ಕಾಂಗ್ರೆಸ್ ಯಾಕೆ ಉಲ್ಲಂಘಿಸಿತು ? ಇವೇ ಮೊದಲಾದ ಪ್ರಶ್ನೆಗಳನ್ನು ಕೋಯಾ ಸಂಪುಟ ರಚನೆಯಾದಾಗ ಕೇರಳದ ಜನ ಕೇಳಿದ್ದಾರೆ; ಈಗಲೂ ಕೇಳುತ್ತಿದ್ದಾರೆ.

ಜನಸಂಘ-ಆರ್. ಎಸ್. ಎಸ್. ಬೆಂಬಲಿತ ಸರ್ಕಾರ:

ಹೊಸ ಸಂಪುಟಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿರುವ ಪಕ್ಷ ಕಾಂಗ್ರೆಸ್ ಒಂದೇ ಅಲ್ಲ. ಜನಸಂಘ ಮತ್ತು ಆರೆಸ್ಸೆಸ್‌ಗಳೇ ಅತಿಮುಖ್ಯ ಭಾಗವಾಗಿರುವ ಕೇರಳದ ಜನತಾಪಕ್ಷವೂ ಅದನ್ನು ಬೆಂಬಲಿಸುತ್ತಿದೆ. ನಿರಂಕುಶಾಧಿಕಾರ ಮತ್ತು ಕೋಮುವಾದದ ವಿರುದ್ಧ ಪ್ರಬಲ ಹೋರಾಟ ನೀಡಬೇಕಾಗಿದ್ದ ಅಂಟೋಣಿ ಕಾಂಗ್ರೆಸ್ ಇವೆರಡೂ ದುಷ್ಟಶಕ್ತಿಗಳು ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ (ಐ) ಬೆಂಬಲಿಸುತ್ತಿರುವ ಬಣವನ್ನೇ ಹೋಗಿ ಸೇರಿಕೊಂಡಿರುವುದು ಒಂದು ದೊಡ್ಡ ದುರಂತ.

ಕೋಯಾ ಸಂಪುಟದಲ್ಲಿ ನಿಜವಾಗಿ ಮುಂದಾಳುತ್ವ ವಹಿಸಿರುವ ಪಕ್ಷ ಕಾಂಗ್ರೆಸ್ (ಐ) ಎನ್ನುವುದಕ್ಕೆ ಯಾವುದೇ ಸಂಶಯವಿಲ್ಲ. ಕೆಲದಿನಗಳ ಹಿಂದೆ ಈ ಮಾತನ್ನು ಸೂಚ್ಯವಾಗಿ ಹೇಳುತ್ತಿದ್ದ ಸಿ. ಎಂ. ಸ್ಟೀಫನ್ ಮತ್ತು ಕೆ. ಕರುಣಾಕರನ್‌ರಂತಹ ಮುಂದಾಳುಗಳು ಇದೀಗ ಇದೇ ಮಾತನ್ನು ಬಹಿರಂಗವಾಗಿ ಸಾರುತ್ತಿದ್ದಾರೆ. ಮಂತ್ರಿ ಮಂಡಲದಲ್ಲಿ ಭಾಗಿಗಳಾಗಿರುವ ಪಕ್ಷಗಳಾಗಲೀ ಅಥವಾ ಅದನ್ನು ಹೊರಗಿನಿಂದ ಬೆಂಬಲಿಸುತ್ತಿರುವ ಯಾವುದೇ ರಾಜಕೀಯ ಪಕ್ಷಗಳಾಗಲೀ ಕಾಂಗ್ರೆಸ್ ಮುಂದಾಳುಗಳ ಈ ಹೇಳಿಕೆಯನ್ನು ಪ್ರಶ್ನಿಸುವ ಧೈರ್ಯ ತೋರಿಸುತ್ತಿಲ್ಲ. ಮುಖ್ಯಮಂತ್ರಿ ಕೋಯಾ ಅಂತೂ ತಾನು ಸ್ವತಂತ್ರವಾಗಿ ಯಾವುದೇ ತೀರ್ಮಾನ ಕೈಗೊಳ್ಳಲೂ ಅಸಮರ್ಥ ಎಂದು ತನ್ನ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ. ತಾನು ಕಾಂಗ್ರೆಸ್ ಪಕ್ಷದ ಕೈಗೊಂಬೆ ಮಾತ್ರ ಎನ್ನುವುದನ್ನು ಅವರು ಬಿಡಿಸಿ ಹೇಳಬೇಕಾಗಿಲ್ಲ.

ರಾಜನ್ ಪ್ರಕರಣವನ್ನನುಸರಿಸಿ ಕರುಣಾಕರನ್ ಮುಖ್ಯಮಂತ್ರಿ ಪದವಿಗೆ ರಾಜೀನಾಮೆಯಿತ್ತ ಮೇಲೆ ಕಾಂಗ್ರೆಸ್ (ಐ) ಕೇರಳದಲ್ಲಿ ತನ್ನೆಲ್ಲ ಮಿತ್ರರಿಂದಲೂ ಪ್ರತ್ಯೇಕಿಸಲ್ಪಟ್ಟು ಅಸ್ಪೃಶ್ಯನಂತಾಗಿತ್ತು. ಇದೀಗ ಕೋಯಾ ಸಂಪುಟಕ್ಕೆ ಬೆಂಬಲ ನೀಡುವ ಅವಕಾಶವನ್ನು ಗಳಿಸಿಕೊಳ್ಳುವ ಮೂಲಕ ಕಾಂಗ್ರೆಸ್ ಈ ಪ್ರತ್ಯೇಕತೆಯಿಂದ ವಿಮೋಚನೆಗೊಂಡಿದೆ. ಅಷ್ಟೇ ಅಲ್ಲ ಸಂಪುಟದ ಸೂತ್ರವೇ ಅದರ ಕೈಯಲ್ಲಿದೆ. ಇನ್ನು ಅಂಟೋಣಿ ಕಾಂಗ್ರೆಸ್ ಕೂಡಾ ಕಾಂಗ್ರೆಸ್ಸಿನೊಂದಿಗೆ ಸೇರಿ ಕೋಯಾ ಸಂಪುಟಕ್ಕೆ ಬೆಂಬಲ ನೀಡಿದೆಯೆಂದಮೇಲೆ ಕಾಂಗ್ರೆಸ್ ಮುಂದಾಳುಗಳಿಗೆ ಇದಕ್ಕಿಂತ ಹೆಚ್ಚಿನ ಆನಂದ ಇನ್ನೇನು ಬೇಕು ?

ಕೋಯಾ ಸರಕಾರ ಯಾವ ಕಾಲದಲ್ಲೂ ಸುಭದ್ರ ಸರಕಾರವೆನಿಸಿಕೊಂಡಿರಲಿಲ್ಲ. ಸಂಪುಟ ರಚನೆಯಾದ ಕೆಲವೇ ದಿನಗಳಲ್ಲಿ ಕೆ. ಎಂ. ಮಣಿ ಗುಂಪಿನ ಕೇರಳ ಕಾಂಗ್ರೆಸ್ ಈ ಸಂಯುಕ್ತ ರಂಗದಿಂದ ಹೊರ ನಡೆಯಿತು. 141 ಸದಸ್ಯರಿರುವ ವಿಧಾನ ಸಭೆಯಲ್ಲಿ ಸಂಪುಟದ ಬೆಂಬಲ ಕೇವಲ 68ಕ್ಕೆ ಇಳಿದು ಅದು ಅಲ್ಪಸಂಖ್ಯಾತ ಸರಕಾರವಾಗಿ ಪರಿಣಮಿಸಿತು. ಶಾಸಕರ ಬೆಂಬಲವನ್ನು ಕ್ರಯಕೊಟ್ಟು ಕೊಂಡುಕೊಳ್ಳುವ ಕುತ್ಸಿತ ಪ್ರಯತ್ನವೂ ಸಾಕಷ್ಟು ನಡೆಯಿತು. ಪಶ್ಚಿಮ ಏಷ್ಯಾದಲ್ಲಿ ನೆಲೆಸಿರುವ ಕೇರಳದ ದೊಡ್ಡ ದೊಡ್ಡ ಕಂಟ್ರಾಕ್ಟರುಗಳೂ, ಸ್ಥಳೀಯ ವ್ಯಾಪಾರಿಗಳೂ ಇದಕ್ಕಾಗಿ ನೋಟಿನ ಕಂತೆಗಳನ್ನೇ ಎಸೆದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಸಿ. ಎಫ್. ಡಿ. ಯ ಏಕಮಾತ್ರ ಸದಸ್ಯ ನೀಲಲೋಹಿತದಾಸ್ ಮತ್ತು ಕೆ. ಎಂ. ಮಣಿ ಗುಂಪಿನ ಕೇರಳ ಕಾಂಗ್ರೆಸ್ ಸದಸ್ಯ ಕೆ. ಎ. ಮಾಥ್ಯೂ-ಇವರಿಬ್ಬರೂ ತಮ್ಮ ನಿಷ್ಠೆ ಬದಲಾಯಿಸುವಂತೆ ಮಾಡಲಾಯಿತು. ಅವರಿಬ್ಬರೂ ಈಗ ಮಂತ್ರಿಗಳಾಗಿದ್ದಾರೆ. ತುಂಬಾ ತಮಾಷೆಯ ಸಂಗತಿಯೆಂದರೆ ಕೆ. ಎ. ಮಾಥ್ಯೂ ಕೋಯಾ ಸಂಪುಟಕ್ಕೆ ತನ್ನ ಬೆಂಬಲ ಸಾರಿದ ವಾರ್ತೆ ಪತ್ರಿಕಾ ಕಚೇರಿಗಳಿಗೆ ಹೋಗುವುದಕ್ಕೆ ಮೊದಲೇ ಅವರನ್ನು ತನ್ನ ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳಬೇಕೆಂದು ರಾಜ್ಯಪಾಲಿಗೆ ಮುಖ್ಯಮಂತ್ರಿ ಕೋಯಾ ಶಿಫಾರಸು ಮಾಡಿಯಾಗಿತ್ತು! ಒಬ್ಬ ಎಮ್. ಎಲ್. ಎ. ಯಂತೂ ರಾಜ್ಯಪಾಲಕಿಯ ಬಳಿ ಯಾವುದೋ ಕೆಲಸಕ್ಕಾಗಿ ಹೋದುದನ್ನು ಕಂಡ ಇತರ ಮಂತ್ರಿಗಳು ಬಹುಶಃ ಈ ಶಾಸಕ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿದ್ದಾನೆಂದು ಭಾವಿಸಿ ಕಂಗಾಲಾದರು! ಕೆಲವು ಭಾರಿ ಕುಳಗಳು ಕೂಡಲೇ ಅವನ ಬಳಿಗೆ ಧಾವಿಸಿ ತನ್ನ ಬೆಂಬಲವನ್ನು ಮುಂದುವರಿಸಲು ಆತ ಏನು ಬಯಸುತ್ತಾನೆಂದೂ ವಿಚಾರಿಸಿಕೊಂಡರು. ಕೋಯಾ ಸರಕಾರ ಅದೆಷ್ಟು ಅಸ್ಥಿರತೆಯಲ್ಲಿ ತೊನೆದಾಡುತ್ತಿದೆಯೆನ್ನುವುದಕ್ಕೆ ಈ ಉದಾಹರಣೆಗಳೇ ಸಾಕು.

ಜನತಾಪಕ್ಷದ ವಿಚಾರವೂ ಇಷ್ಟೇ. ಅಖಿಲ ಭಾರತ ಮಟ್ಟದಲ್ಲಿ ಅದರ ನಿಲುಮೆ ಏನೇ ಇದ್ದರೂ ಕೇರಳದ ಮಟ್ಟಿಗಂತೂ ಅದು ಕಾಂಗ್ರೆಸ್ (ಐ) ಜೊತೆಗೆ ನಂಟು ಬೆಳೆಸಿರುವುದರಲ್ಲಿ ಏನೂ ಆಶ್ಚರ್ಯವಿಲ್ಲ. ವಿಷಮ ಪರಿಸ್ಥಿತಿ ಜೋರಾಗಿದ್ದ ಕಾಲದಲ್ಲೂ ಅಂದಿನ ಗೃಹಮಂತ್ರಿ ಕೆ.ಕರುಣಾಕರನ್ ಆರೆಸ್ಸೆಸ್ ಜೊತೆಗೆ ತುಂಬಾ ಒಳ್ಳೆಯ ಸಂಬಂಧವಿರಿಸಿಕೊಂಡಿದ್ದರು. ಆರೆಸ್ಸೆಸ್‌ನ ಗೂಂಡಾಗಳು ಸಿ. ಪಿ. ಐ. (ಎಂ) ಕಾರ್ಯಕರ್ತರ ಮೇಲೆ ಮರಣಾಂತಿಕ ಹಲ್ಲೆಗಳನ್ನು ನಡೆಸಿ ಕೆಲವರನ್ನು ಕೊಲೆಗೈದಾಗಲೂ ಕರುಣಾಕರನ್ ಸಿ. ಪಿ. ಐ. (ಎಂ)ನ ಕಾರ್ಯಕರ್ತರ ಮೇಲೆ ತನ್ನ ಪೋಲೀಸರನ್ನು 'ಛೂ' ಬಿಟ್ಟರೇ ಹೊರತು ಆರೆಸ್ಸೆಸ್ ವಿರುದ್ಧ ಅಲ್ಲ! ಕರುಣಾಕರನ್ ರಾಜೀನಾಮೆಯ ನಂತರ ಸ್ವಲ್ಪಕಾಲ ದುರ್ಬಲಗೊಂಡಿದ್ದ ಈ ಅಪವಿತ್ರ ಮೈತ್ರಿ ಈಗ ಪುನರುಜ್ಜೀವನಗೊಂಡಿದೆ. ಸಿ. ಪಿ. ಐ. (ಎಂ) ಮತ್ತಿತರ ಎಡಪಕ್ಷಗಳನ್ನು ಹತ್ತಿಕ್ಕಲು ನಿರಂಕುಶಾಧಿಕಾರಿಗಳೂ ಕೋಮುವಾದಿ ಶಕ್ತಿಗಳೂ ಮತ್ತೆ ಒಂದಾಗಿವೆ.

ಕೋಮುವಾದ ತಲೆಯೆತ್ತುತ್ತಿದೆ:

ಕೇರಳದ ರಾಜಕೀಯದಲ್ಲುಂಟಾದ ಈ ಹೊಸ ಹೊಂದಾಣಿಕೆ ರಾಜ್ಯದಲ್ಲಿ ಕೋಮುವಾದಿ, ಜಾತೀಯವಾದಿ ಶಕ್ತಿಗಳಿಗೆ ತಲೆಯೆತ್ತಲು ಸುವರ್ಣಾವಕಾಶ ಒದಗಿಸಿದೆ! ಅಪ್ಪಟ ಸಂದರ್ಭಸಾಧಕತನ ವಿಕೃತ ಶಿಶುವಾದ ಕೋಯಾ ಸರಕಾರಕ್ಕೆ ಸಹಜವಾಗಿಯೇ ಕಂಡು ಬರುತ್ತಿರುವ ವಿರೋಧವನ್ನು ಕೆಲವು ಮುಸ್ಲಿಂಲೀಗ್ ಮುಖಂಡರು ಒಬ್ಬ ಮುಸ್ಲಿಂ ಮುಖ್ಯಮಂತ್ರಿಯಾಗಿರುವುದಕ್ಕೆ ತೋರಿಸಲಾಗುತ್ತಿರುವ ವಿರೋಧವೆಂದು ಅಪಪ್ರಚಾರ ನಡೆಸುತ್ತಿದ್ದಾರೆ. ಇದು ಕೋಮುವಾರು ಭಾವನೆಗಳನ್ನು ಬಡಿದೆಬ್ಬಿಸಿ ಎಡ ಮತ್ತು ಪ್ರಜಾಸತ್ತಾತ್ಮಕ ಉದ್ದೇಶಗಳಿಗೆ ವಿರುದ್ಧವಾದ ಉದ್ದೇಶಗಳನ್ನು ಸಾಧಿಸಿಕೊಳ್ಳುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಇನ್ನೊಂದೆಡೆ ಕೋಯಾ ಸಂಪುಟಕ್ಕೆ ಬೆಂಬಲ ನೀಡಿರುವ ಆರೆಸ್ಸೆಸ್ ಕೂಡಾ ತನ್ನ ಬೇಳೆ ಬೇಯಿಸಿಕೊಳ್ಳಲು ಈ ಸದವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದೆ.

ಸಿ. ಪಿ. ಐ. ನ ಪಿ. ಕೆ. ವಾಸುದೇವನ್ ನಾಯರ್ ಮುಖ್ಯಮಂತ್ರಿಯಾಗಿದ್ದ ಹಿಂದಿನ ಸರಕಾರವು ಮುಸ್ಲಿಂ ಜನತೆಯನ್ನೂ ಒಳಗೊಂಡ ಜನಸಾಮಾನ್ಯರ ಒತ್ತಡಕ್ಕೆ ಮಣಿದು ಶಾಲೆ, ಕಾಲೇಜು ಮತ್ತಿತರ ಶೈಕ್ಷಣಿಕ ಸಂಸ್ಥೆಗಳ ಆವರಣದಲ್ಲಿ ಆರೆಸ್ಸೆಸ್‌ನ ಶಿಬಿರ ನಡೆಸುವುದನ್ನೂ ಕವಾಯತು ನಡೆಸುವುದನ್ನೂ ನಿಷೇಧಿಸಿತ್ತು. ಆದರೆ ಈಗ ಆರೆಸ್ಸೆಸ್ ತನ್ನ ಚಟುವಟಿಕೆಗಳಿಗಾಗಿ ಮರಳಿ ಇಂತಹ ಸ್ಥಳಗಳನ್ನು ಉಪಯೋಗಿಸುತ್ತಿದೆ. ಕೋಯಾ ಸರಕಾರ ಇದನ್ನೂ ನೋಡಿಯೂ ನೋಡದಂತೆ ತೆಪ್ಪಗೆ ಕುಳಿತಿದೆ! ಸರಕಾರದ ಬೆಂಬಲದೊಂದಿಗೆ ಆರೆಸ್ಸೆಸ್ ತನ್ನ ಸಮಾಜ ವಿರೋಧಿ ಚಟುವಟಿಕೆಗಳನ್ನು ಇನ್ನಷ್ಟು ತೀವ್ರಗೊಳಿಸಿದೆ ಮಾತ್ರವಲ್ಲ; ಕೋಮುವಾರು ದ್ವೇಷ ಭಾವನೆಗೆ ನೀರೆರೆದು ಪೋಷಿಸುತ್ತಿದೆ, ಕಳೆದೆರಡು ವಾರಗಳಲ್ಲಿ ಕಣ್ಣಾನೂರು, ಮಲಪ್ಪುರಂ ಮತ್ತು ತಿರುವನಂತಪುರ ಜಿಲ್ಲೆಗಳಲ್ಲಿ ಪ್ರಜಾಸತ್ತಾತ್ಮಕ ಸಾಮುದಾಯಿಕ ಸಂಘಟನೆಗಳ ಒಟ್ಟು ಮೂವರು ಕಾರ್ಯಕರ್ತರು ಆರೆಸ್ಸೆಸ್‌ನ ಗೂಂಡಾಗಳಿಂದ ಕೊಲ್ಲಲ್ಪಟ್ಟಿದ್ದಾರೆ. ಕೆಲವೇ ದಿನಗಳ ಹಿಂದೆ ಆರೆಸ್ಸೆಸನ್ನು ಕಟುವಾಗಿ ನಿಂದಿಸುತ್ತಿದ್ದ ಕೋಯಾ ಈಗ ಮೌನತಳೆದಿರುವುದು ಅರ್ಥಪೂರ್ಣವಾಗಿದೆ. 'ಮುಸ್ಲಿಂ' ಮುಖ್ಯಮಂತ್ರಿಯ ಬೆಂಬಲಾರ್ಥ ಯಾವ ಮುಸ್ಲಿಂ ಜನತೆಯ ಭಾವನೆಗಳನ್ನು ಪ್ರಚೋದಿಸಲಾಗುತ್ತಿದೆಯೋ ಅಂತಹ ಜನತೆಗೆ ಇಂದು ಆರೆಸ್ಸೆಸ್‌ನ ಪೀಡೆ ತುಂಬಾ ಕಳವಳವುಂಟು ಮಾಡಿದೆ.

ಕಾಂಗ್ರೆಸ್ಸಿಗರು ಕೇಳುತ್ತಿರುವ ಪ್ರಶ್ನೆ:

ಈ ಮಧ್ಯೆ ಅಂಟೋಣಿ ಕಾಂಗ್ರೆಸ್‌ನ ಮುಂದಾಳುಗಳ ವರ್ತನೆಯ ಬಗ್ಗೆ ಪಕ್ಷದ ಸಾಮಾನ್ಯ ಸದಸ್ಯರಲ್ಲೂ ಕೆಲವು ಮುಖಂಡರಲ್ಲೂ ತೀವ್ರ ಅತೃಪ್ತಿ ತಾಂಡವವಾಡುತ್ತಿದೆ. ಅವರು ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಒಂದುಗೂಡುವಿಕೆಗಾಗಿ ದುಡಿಯಬೇಕೆಂದು ಬೆಂಗಳೂರಲ್ಲಿ ನಡೆದ ಎ. ಐ. ಸಿ. ಸಿ. ಸಮಾವೇಶ ಮತ್ತು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಕೊಚ್ಚಿ ಅಧಿವೇಶನದಲ್ಲಿ ನಿರ್ಧರಿಸಲ್ಪಟ್ಟಿರುವಾಗ ಕಾಂಗ್ರೆಸ್ ಮುಂದಾಳುಗಳು ಕೆ. ಪಿ. ಸಿ. ಸಿ. ಯ ಕಾರ್ಯಕಾರಿಣಿ ಅಥವಾ ಜನರಲ್ ಕೌನ್ಸಿಲಿನೊಂದಿಗೆ ವಿಚಾರ ವಿಮರ್ಶೆ ನಡೆಸದೆ ಈ ನಿರ್ದೇಶವನ್ನು ಉಲ್ಲಂಘಿಸಲು ಕಾರಣವೇನು ? 'ಲ್ಯಾಂಡ್ ಗಿಫ್ಟ್ ಮಸೂದೆ' ವಿಧಾನ ಸಭೆಯಲ್ಲಿ ಅಂಗೀಕೃತವಾದ ಮೇಲೆ ಕಾಂಗ್ರೆಸ್ಸು ಮರಳಿ ಸರ್ವಾಧಿಕಾರ ವಿರೋಧಿ, ಕೋಮುವಾದ ವಿರೋಧಿ ಒಕ್ಕೂಟವನ್ನು ಸೇರಿಕೊಳ್ಳುವುದೆಂದು ಈ ಮೊದಲು ಆಶ್ವಾಸನೆ ನೀಡಲಾಗಿದ್ದರೂ ಅದರ ಮುಂದಾಳುಗಳು ಈಗಲೂ ಅಲ್ಪ ಬಹುಮತದಲ್ಲಿ ಜೀವ ಉಳಿಸಿಕೊಂಡಿರುವ ಕೋಯಾ ಮಂತ್ರಿ ಮಂಡಲದ ಉಳಿಯುವಿಕೆಗಾಗಿ ನಡೆಯುತಿರುವ ಪರದಾಟದಲ್ಲಿ ಭಾಗಿಗಳಾಗಿರುವುದೇಕೆ ? ಸಿ. ಪಿ. ಐ. (ಎಂ) 'ದೊಡ್ಡಣ್ಣ' ನಂತೆ ವರ್ತಿಸುತ್ತಿರುವುದರಿಂದಾಗಿ ತಾನು ಈಗಿನ ನಿಲುಮೆಯನ್ನು ತಳೆಯಬೇಕಾಯಿತೆಂದು ಎ. ಕೆ. ಅಂಟೋಣಿ ಹೇಳುತ್ತಿದ್ದರು. ಹಾಗಾದರೆ ಅವರೀಗ "ದೇವರಾಜ ಅರಸ್ ನಿರೂಪಿಸಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಐಕ್ಯತೆಯ ಸಿದ್ಧಾಂತವನ್ನು ಕೇರಳದಲ್ಲಿ ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲ" ವೆನ್ನುತ್ತಿರುವ ಸಿ. ಎಂ. ಸ್ಟೀಫನ್ ಅವರ 'ದೊಡ್ಡಣ್ಣ'ನ ವರ್ತ

[6ನೇ ಪುಟ ನೋಡಿ]

ಹರಿಜನ ಕಾರ್ಮಿಕನ ಕೊಲೆ - ಪೋಲೀಸರ ದೌರ್ಜನ್ಯ

ತಾ. 25-11-1979 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ಶಾಖೆಯ ಕಾರ್ಯದರ್ಶಿ ಕಾಂ. ಎ. ಸಿ. ಕೇಶವರ ನೇತೃತ್ವದಲ್ಲಿ ಪೋಲೀಸರ ದೌರ್ಜನ್ಯಕ್ಕೆ ಸಾವಿಗೀಡಾದ ಶಂಭು ಎನ್ನುವವರ ಶವದ ಮೆರವಣಿಗೆಯು ನಡೆಯಿತು. ಮೂಡಿಗೆರೆಯ ಸುತ್ತ ಮುತ್ತಲಿನ ತೋಟಗಳ ಸಾವಿರಾರು ಕಾರ್ಮಿಕರು ಮತ್ತು ಸಾರ್ವಜನಿಕರು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಶಂಭು ಕೊಲೆಯ ವಿವರ :

ಮೂಡಿಗೆರೆ ಸಮೀಪದ ಮಾಕೋನಹಳ್ಳಿ ಗ್ರಾಮದ ಶ್ರೀ ಕಂಠೇಗೌಡ ಎಂಬುವವರ ತೋಟವಾದ ನಾಗಪಾಲ್ ಎಸ್ಟೇಟಿನಲ್ಲಿ ಹರಿಜನ ಶಂಭು, ಆತನ ಮಡದಿ ಮತ್ತು ಮೂವರು ಮಕ್ಕಳೊಂದಿಗೆ ಕಳೆದ 20 ವರ್ಷಗಳಿಂದ ಕೆಲಸಮಾಡಿಕೊಂಡಿದ್ದನು. ತಾ. 24-11-1979 ರಂದು ಶಂಭುವಿನ ಮನೆಗೆ ಆತನ ಭಾವ ಮತ್ತು ಅಣ್ಣಂದಿರು ಬಂದಿದ್ದರು. ಅದೇ ಕಾಫಿ ತೋಟದಲ್ಲಿ ಕೆಲಸಮಾಡಿಕೊಂಡಿರುವ ಮತ್ತೊಬ್ಬ ಕೆಲಸಗಾರನಾದ ರಾಜು ಮತ್ತು ಈಶ್ವರಶೆಟ್ಟಿ ಎಂಬುವವರು ತೋಟ ಮಾಲೀಕರಾದ ಶ್ರೀಕಂಠೇಗೌಡರ ಮನೆಗೆ ಹೋಗಿ ಶಂಭು ನಮ್ಮನ್ನು ಹೊಡೆಯಲು ಯಾರೋ ಕೆಲವರನ್ನು ಕರೆದುಕೊಂಡು ಬಂದಿದ್ದಾನೆ ಎಂದು ಸುಳ್ಳು ದೂರನ್ನು ಕೊಟ್ಟರು. ಈ ದೂರಿನ ಸತ್ಯಾಸತ್ಯತೆಯನ್ನು ಗಮನಿಸದೆ ಕಾಫಿ ತೋಟ ಮಾಲೀಕರಾದ ಶ್ರೀಕಂಠೇಗೌಡರು ದೂರವಾಣಿ ಮೂಲಕ ಪೋಲೀಸ್ ಠಾಣೆಗೆ ಮಾತಾಡಿ ತನ್ನ ಕಾರನ್ನು ಕಳುಹಿಸುವುದಾಗಿಯೂ, ಪೋಲೀಸರನ್ನು ಅದರಲ್ಲಿ ತನ್ನ ತೋಟಕ್ಕೆ ಕಳುಹಿಸಿಕೊಡಬೇಕೆಂದು ಕೇಳಿಕೊಂಡರು. 24-11-1979ರ ಸಂಜೆ ಸುಮಾರು 5 ಗಂಟೆಗೆ ಮಾಲೀಕರ ಕಾರಲ್ಲಿ ಆನಂದ ಮತ್ತು ಬಸವರಾಜು ಎನ್ನುವ ಪೋಲೀಸರ ಪೇದೆಗಳು ಬಂದರು. ಪೋಲೀಸರು ಬರುವುದಕ್ಕೆ ಮುಂಚೆ ಶ್ರೀಕಂಠೇಗೌಡರು ಶಂಭು ಮತ್ತು ಆತನ ಹೆಂಡತಿಯನ್ನು ಅವರ ಮನೆಯ ಹತ್ತಿರವೆ ಕುಳ್ಳಿಸಿಕೊಂಡಿದ್ದರು. ಮಾಲೀಕರ ಮನೆಗೆ ಪೋಲೀಸರು ಬಂದ ತಕ್ಷಣ ಶಂಭುವನ್ನು ತೋರಿಸಿ ಮಾಲೀಕರು "ಈತನಿಗೆ ಭಾರೀ ಅಹಂಕಾರ ಇದೆ. ಚೆನ್ನಾಗಿ ಥಳಿಸಿರಿ, ಹೊಡೆಯಿರಿ" ಎಂದು ಹೇಳಿದ ಕೂಡಲೆ ಪೋಲೀಸರು ಜಿಗಿದು ಶಂಭುವನ್ನು ಮನಬಂದಂತೆ ಹೊಡೆಯಲು ಪ್ರಾರಂಭಿಸಿದರು. ಸಾಹುಕಾರರು ನಿನ್ನನ್ನು ಕೊಲ್ಲಲು ಹೇಳಿದ್ದಾರೆಂದು ಹೇಳುತ್ತಾ ಆತನ ಎರಡು ಕೆನ್ನೆಗಳಿಗೂ ಬಿಗಿದರು. ಆನಂದ ಎನ್ನುವ ಪೇದೆಯು ಶಂಭುವು ಹೊದೆದುಕೊಂಡಿದ್ದ ಟವೆಲನ್ನು ಶಂಭುವಿನ ಕತ್ತಿಗೆ ಬಿಗಿದು ಒಂದೇ ಸಮನೆ ಹೊಡೆಯುತ್ತಾ ಕಾರಿನಲ್ಲಿ ನೂಕಿದರು. ಆಗಲೇ ಶಂಭುವಿನ ಪ್ರಾಣಪಕ್ಷಿ ಹಾರಿಹೋಗಿತ್ತು. ನಂತರ ಪೋಲೀಸ್ ಪೇದೆಯಾದ ಆನಂದನು ಶಂಭುವಿನ ಹೆಂಡತಿಯಾದ ಸುಕುಡಿಯಲ್ಲಿ ಶಂಭುವಿನ ಬಾಯಿಗೆ ನೀರನ್ನು ಹಾಕು ಎಂದು ಗರ್ಜಿಸಿದರು. ಇದನ್ನು ಕೇಳಿದ ಸುಕುಡಿಯು "ನನ್ನ ಗಂಡನನ್ನು ಕೊಂದವರು ನೀವು, ನೀವೇ ನೀರು ಹಾಕಿ" ಎಂದಳು. ಪೋಲೀಸರ ಪೇದೆಯಾದ ಆನಂದನು ಮಾಲೀಕರಾದ ಶ್ರೀಕಂಠೇಗೌಡರ ಮನೆಗೆ ಹೋಗಿ ನೀರನ್ನು ತಂದು ಶಂಭುವಿನ ಬಾಯಿಗೆ ಹಾಕಿದಾಗ ನೀರು ಒಳಗೆ ಸೇರಲಿಲ್ಲ. ಪೋಲೀಸ್ ಪೇದೆಗಳಾದ ಆನಂದ ಮತ್ತು ಬಸವರಾಜ ಇವರುಗಳು ಶಂಭುವಿನ ಹೆಂಡತಿಯನ್ನು ಬಲತ್ಕಾರವಾಗಿ ಕಾರಿನಲ್ಲಿ ಕೂರಿಸಿಕೊಂಡು ಮೂಡಿಗೆರೆಯ ಪೋಲೀಸ್ ಠಾಣೆಯ ಎದುರುಗಡೆ ನಿಲ್ಲಿಸಿದರು. ಪೋಲೀಸ್ ಪೇದೆಗಳಿಬ್ಬರೂ ಠಾಣೆಗೆ ಇಳಿದುಹೋದರು. ಕಾರು ಮೂಡಿಗೆರೆ ಎಂ. ಜಿ. ಎಂ. ಆಸ್ಪತ್ರೆಗೆ ಹೋಯಿತು. ಕಾರಿನಲ್ಲಿ ತೋಟ ಮಾಲೀಕರಾದ ಶ್ರೀಕಂಠೇಗೌಡರು ಇದ್ದರು. ಆಸ್ಪತ್ರೆಯಲ್ಲಿದ್ದ ಮಹಿಳಾ ವೈದ್ಯರಿಗೆ ತೋರಿಸಿದಾಗ ಅವರು ಶಂಭು ಈಗಾಗಲೇ ತೀರಿಕೊಂಡಿರುತ್ತಾನೆಂದು ತಿಳಿಸಿದರು. ಆಸ್ಪತ್ರೆಯ ಶವದ ಕೋಣೆಗೆ ಹೆಣವನ್ನು ಸಾಗಿಸಲಾಯಿತು. ನಂತರ ಶಂಭುವಿನ ಹೆಂಡತಿ ಮತ್ತು ಅಣ್ಣ ತಮ್ಮಂದಿರನ್ನು ಪೋಲೀಸ್ ಠಾಣೆಗೆ ಕರೆತಂದು ಅಲ್ಲಿದ್ದ ಪೋಲೀಸರು "ನೋಡಿ ಇವರು ಸಾಹುಕಾರರು ಇವರ ಮೇಲೆ ಕೇಸ್ ಹಾಕಿದರೆ ಇವರು ಚಿಕ್ಕಮಗಳೂರು, ಬೆಂಗಳೂರು, ದಿಲ್ಲಿಯವರೆಗೆ ಹೋಗುತ್ತಾರೆ. ನಿಮಗೆ ಇದು ಸಾಧ್ಯವೊ? ಇಲ್ಲಾ! ಆದ್ದರಿಂದ ಏನಾದರೂ ಸ್ವಲ್ಪ ಹಣ ಕೊಡಿಸೋಣ. ಕೇಸು ಯಾವುದೂ ಬೇಡಾ. ಆದದ್ದು ಆಯಿತು ಹೋದದ್ದು ಹೋಯಿತು' ಅಂತ ಹೇಳಿದರು. ಈ ಉಪದೇಶಕ್ಕೆ ಶಂಭುವಿನ ಹೆಂಡತಿ ಮತ್ತು ಆತನ ಅಣ್ಣ ತಮ್ಮಂದಿರು ಒಪ್ಪಲಿಲ್ಲ. ಠಾಣೆಯಿಂದ ಇವರೆಲ್ಲಾ ಕೂಡಲೇ ಹೊರಗೆ ಬಂದರು.

ತಾ. 25-11-1979 ರಂದು ಬೆಳಿಗ್ಗೆ ಈ ಸುದ್ದಿಯನ್ನು ತಿಳಿದು ಮೂಡಿಗೆರೆಯ ಸುತ್ತುಮುತ್ತಲಿನ ಸಾವಿರಾರು ತೋಟ ಕಾರ್ಮಿಕರು ಆಸ್ಪತ್ರೆಯ ಮುಂಭಾಗದಲ್ಲಿ ಸೇರತೊಡಗಿದರು ಇವರ ಪೈಕಿ ಕೆಲವು ಕಾರ್ಮಿಕರು ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷರು ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೂಡಿಗೆರೆ ಶಾಖೆಯ ಕಾಂ. ಎ. ಸಿ. ಕೇಶವರ ನಿವಾಸಕ್ಕೆ ತೆರಳಿ ಅವರನ್ನು ಭೇಟಿ ಮಾಡಿ "ಮೂಡಿಗೆರೆ ಪೋಲೀಸರು ಒಬ್ಬ ತೋಟ ಕಾರ್ಮಿಕನನ್ನು ಹೊಡೆದು ಕೊಂದಿರುತ್ತಾರೆ. ಕೂಡಲೇ ನೀವು ಬನ್ನಿ" ಎಂದು ಕೇಳಿಕೊಂಡರು. ಸುದ್ದಿ ತಿಳಿದ ಕೂಡಲೆ ಕಾಂ. ಎ. ಸಿ. ಕೇಶವರು ಎಂ. ಜಿ. ಎಂ. ಆಸ್ಪತ್ರೆಗೆ ಕರೆಯಲು ಬಂದ ಕಾರ್ಮಿಕರ ಜತೆ ಧಾವಿಸಿದರು. ಆಗ ಸುಮಾರು ಬೆಳಿಗ್ಗಿನ 8-30ರ ಸಮಯ.

ಶಂಭುವಿನ ಮೃತದೇಹವನ್ನು ನೋಡಬೇಕೆಂದು ಕೇಶವರು ಕೇಳಿಕೊಂಡಾಗ ಅಲ್ಲಿ ಕಾವಲಿದ್ದ ಪೋಲೀಸ್ ಪೇದೆಗಳು "ಎಸ್. ಪಿ. ಸಾಹೇಬ್ರು ಈಗ ಬರಲಿದ್ದಾರೆ ಅವರು ಬಂದ ನಂತರ ನೋಡಬಹುದೆಂದು ಹೇಳಿದರು. ರೊಚ್ಚಿಗೆದ್ದ ಕಾರ್ಮಿಕರನ್ನು ಸಾಂತ್ವನಗೊಳಿಸುತ್ತಾ ಕಾಂ. ಕೇಶವರು "ಆದ ಅನ್ಯಾಯವನ್ನು ನಾವೆಲ್ಲರೂ ಒಗ್ಗಟ್ಟಿನಿಂದ ಪ್ರತಿಭಟಿಸೋಣ. ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸುವಂತೆ ಒತ್ತಾಯಿಸೋಣ ಎಂದು ಹೇಳುತ್ತಾ ಶಾಂತಿಯುತರಾಗಿರಲು ಕಾರ್ಮಿಕರನ್ನು ಕೇಳಿಕೊಳ್ಳುತ್ತಿದ್ದರು. ಸುಮಾರು ಬೆಳಗಿನ 11-30ರ ಸಮಯಕ್ಕೆ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಯಾದ 'ಸಾಂಗ್ಲಿಯಾನಾ' ಆಸ್ಪತ್ರೆಗೆ ಬಂದರು. ಅವರ ಜತೆಯಲ್ಲಿ ಒಬ್ಬರು ನ್ಯಾಯಾಧೀಶರು (Additional judge) ಇದ್ದರು. ಶವ ಪರೀಕ್ಷೆಯ ಮೊದಲು ನಾಲ್ಕು ಜನರ ಒಂದು ಸಮಿತಿಯನ್ನು ಮಾಡಿ ಸಮಿತಿಯವರು ಮತ್ತು ಮೃತನ ಸಂಬಂಧಿಕರು ಶವವನ್ನು ನೋಡಲು ಬರಬಹುದೆಂದು ನ್ಯಾಯಾಧೀಶರು ಹೇಳಿದರು. ಈ ಸಮಿತಿಗೆ ಕಾಂ. ಕೇಶವರನ್ನು ಸೇರಿಸಿಕೊಳ್ಳಲಾಯಿತು. ನಂತರ ಕಾಂ. ಕೇಶವರು, ಮೃತನ ಸಂಬಂಧಿಕರು. ಎಸ್. ಪಿ., ಡಿ. ವೈ. ಎಸ್. ಪಿ., ನ್ಯಾಯಾಧೀಶರು ಮತ್ತು ಡಾಕ್ಟರ್‌ರೊಂದಿಗೆ ಶವಕೋಣೆಗೆ ಹೋಗಿ ಶವವನ್ನು ನೋಡಿದರು.

ನಂತರ ಕಾಂ. ಎ. ಸಿ. ಕೇಶವರು ಶಂಭುವಿಗೆಹೊಡೆದುಕೊಂದಪೋಲೀಸ್ ಪೇದೆಗಳಿಬ್ಬರನ್ನು ಈ ಕೂಡಲೆ ಬಂಧಿಸಬೇಕೆಂದು ಎಸ್. ಪಿ. ಯವರನ್ನು ಕೇಳಿಕೊಂಡರು. ಎಸ್. ಪಿ. ಯವರು ಕಾನೂನಿನ ಪ್ರಕಾರ ಅವರ ಮೇಲೆ ಕ್ರಮಕೈಕೊಳ್ಳುತ್ತೇನೆ ಅಂತ ಮಾತ್ರ ಹೇಳಿದರು. ಈ ಮಾತುಗಳನ್ನು ಕಾಂ. ಕೇಶವರು ಮತ್ತು ಕಿಕ್ಕಿರಿದು ನೆರೆದ ಕಾರ್ಮಿಕರು ಒಪ್ಪಲಿಲ್ಲ. ಅಲ್ಲಿಂದ ಎಸ್. ಪಿ. ಯವರು ನಾಗಪಾಲ ತೋಟದ ಮಾಲೀಕರಾದ ಶ್ರೀಕಂಠೇಗೌಡರ ಮನೆಗೆ ಹೋದರು. ಆಗ ಸುಮಾರು ಮಧ್ಯಾಹ್ನ 3 ಗಂಟೆಯ ಸಮಯವಾಗಿತ್ತು.

ಸ್ವಲ್ಪ ಸಮಯದಲ್ಲಿಯೆ ಎಸ್. ಪಿ. ಯವರು ಮೂಡಿಗೆರೆ ಪ್ರವಾಸಿ ಮಂದಿರಕ್ಕೆ ಬಂದು ಕುಳಿತುಕೊಂಡರು. ಸುಮಾರು 5-30 ಗಂಟೆಯ ಒಳಗಾಗಿ ಶಂಭುವಿನ ಮರಣೋತ್ತರ ಶವಪರೀಕ್ಷೆ ನಡೆದು ಹೋಗಿತ್ತು. ಆ ಸಮಯದಲ್ಲಿ ಅಲ್ಲಿಗೆ ಬಂದ ಎಸ್. ಪಿ. ಯವರು ಶಂಭುವಿನ ಶವವನ್ನು ಕಾರಿನ ಡಿಕ್ಕಿ ಅಥವಾ ಟೊಪಿನಲ್ಲಿ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡೋಣಾ ಎಂದು ಕಾಂ. ಕೇಶವ ಮತ್ತು ನೆರೆದ ಕಾರ್ಮಿಕರಿಗೆ ಹೇಳುತ್ತಿದ್ದರು.

ಕಾಂ. ಕೇಶವರು ಮತ್ತು ಕಾರ್ಮಿಕರು ಇದನ್ನು ಒಪ್ಪದೆ ಶವವನ್ನು ನಾವೇ ತೆಗೆದುಕೊಂಡು ಹೋಗಿ ದಫನ ಮಾಡುತ್ತೇವೆಯೆಂದು ತಿಳಿಸಿದರು. ಇದನ್ನು ಕೇಳಿದ ಎಸ್. ಪಿ. ಯವರು ಒಲ್ಲದ ಮನಸ್ಸಿನಿಂದ ಠಾಣೆಗೆ ಹಿಂತಿರುಗಿದರು.

ನಂತರ ನೆರೆದಿದ್ದ ಸಾವಿರಾರು ಕಾರ್ಮಿಕರು ಕಾಂ. ಕೇಶವರ ನೇತೃತ್ವದಲ್ಲಿ ಶಂಭುವಿನ ಶವದ ಸಹಿತ ಮೆರವಣಿಗೆಯನ್ನು ಆಸ್ಪತ್ರೆಯಿಂದ ಹೊರಡಿಸಿದರು. ಸ್ವಲ್ಪ ದೂರದಲ್ಲಿ ಮೂಡಿಗೆರೆಯ ಸಾರ್ವಜನಿಕರು ಮೆರವಣಿಗೆಯಲ್ಲಿಪಾಲ್ಗೊಂಡರು. ಸುಮಾರು 2-3 ಸಾವಿರ ಜನರು ಪೋಲೀಸರ ವಿರುದ್ಧ ಘೋಷಣೆ ಕೂಗುತ್ತಿದ್ದರು. "ತೋಟ ಕೆಲಸಗಾರ ಶಂಭುವನ್ನು ಕೊಂದ ಪೋಲೀಸ್ ಪೇದೆಗಳನ್ನು ಬಂಧಿಸಿ- ಶಂಭುವನ್ನು ಕೊಲ್ಲಲು ಪ್ರೇರೇಪಣೆ ಮಾಡಿದ ಮಾಲೀಕನನ್ನು ಬಂಧಿಸಿ- ಪೋಲೀಸರ ದೌರ್ಜನ್ಯಕ್ಕೆ ಧಿಕ್ಕಾರ-ಎಂಬ ಘೋಷಣೆಗಳೊಂದಿಗೆ ಮೂಡಿಗೆರೆಯ ಎಲ್ಲಾ ಮುಖ್ಯ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆದು ಪೋಲೀಸ್ ಠಾಣೆಯ ಮುಂದುಗಡೆ ಸೇರಿತು. ಶವವನ್ನು ಪೋಲೀಸ್ ಠಾಣೆಯ ಮುಂದುಗಡೆ ಇರಿಸಿ ಪೋಲೀಸರ ವಿರುದ್ಧ ಘೋಷಣೆಯನ್ನು ಕೂಗಲಾಯಿತು. ಕಾಂ. ಎ. ಸಿ. ಕೇಶವರು ಶಂಭುನನ್ನು ಕೊಂದ ಪೋಲೀಸ್ ಪೇದೆಗಳನ್ನು ಬಂಧಿಸಿದ ಹೊರತು ನಾವು ಈ ಶವವನ್ನು ಇಲ್ಲಿಂದ ತೆಗೆದುಕೊಂಡು ಹೋಗುವುದಿಲ್ಲಾ ಎಂದು ಎಸ್. ಪಿ. ಯವರಲ್ಲಿ ಹೇಳಿದರು. ಆಗ ಎಸ್. ಪಿ. ಯವರು "ಶವವನ್ನು ಈಗ ತೆಗೆದುಕೊಂಡು ಹೋಗೋಣ. ಪೇದೆಯವರನ್ನು ಸುಮಾರು ರಾತ್ರಿ 8 ಗಂಟೆಯ ಒಳಗೆ ಕಾನೂನಿನ ಪ್ರಕಾರ ಬಂಧಿಸುತ್ತೇನೆ ಎಂದು ಹೇಳಿದರು.

ಜನಸಮೂಹ ಎಸ್. ಪಿ. ಯವರ ಈ ಭರವಸೆಗೆ ಒಪ್ಪದೆ ಕಾಂ. ಕೇಶವರನ್ನು ಬೆಂಗಳೂರಿನ ಐ. ಜಿ. ಪಿ. ಯವರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಕೇಳಿಕೊಂಡರು. ಕೂಡಲೆ ಕಾಂ. ಕೇಶವರು ದೂರವಾಣಿ ಮೂಲಕ ಐ. ಜಿ. ಪಿ. ಯವರ ಆಫೀಸಿಗೆ ಸಂಪರ್ಕ ಬೆಳೆಸಿ ನಡೆದ ವಿಚಾರವನ್ನು ತಿಳಿಸಿದರು.

ಕಾಂ. ಕೇಶವರು ಪುನಃ ಪೋಲೀಸ್ ಠಾಣೆಗೆಧಾವಿಸಿದಾಗಅಲ್ಲಿ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಪಿ. ಪಾಂಡೆಯವರು ಬಂದಿದ್ದರು. ಜಿಲ್ಲಾಧಿಕಾರಿಗಳು ಎ. ಸಿ. ಕೇಶವರೊಂದಿಗೆ ಮಾತಾಡಿ "ಪೋಲೀಸ್ ಪೇದೆಗಳನ್ನು ಬಂಧಿಸಲು ಆದೇಶ ನೀಡುತ್ತೇನೆ. ಈ ಬಗ್ಗೆ ನಿಮಗೆ ಆಶ್ವಾಸನೆ ಕೊಡುತ್ತೇನೆ ಅಂತ ಹೇಳಿದರು. ಆ ಕೂಡಲೆ ಎಸ್. ಪಿ. ಯವರು ಪೇದೆಗಳನ್ನು ಬಂಧಿಸಿದ್ದೇನೆ. ನೀವು 4 ಜನ ಬಂದು ನೋಡಿರಿ ಎಂದು ಹೇಳಿದರು. ನಂತರ ಕಾಂ. ಎ. ಸಿ. ಕೇಶವರ ನೇತೃತ್ವದಲ್ಲಿ 3-4 ಜನ ಠಾಣೆಯೊಳಗೆ ಹೋಗಿ ಬಂಧಿಖಾನೆಯಲ್ಲಿ ಬಂದಿಸಲ್ಪಟ್ಟ ಪೇದೆಗಳನ್ನು ನೋಡಿದರು. ಕಾಂ. ಕೇಶವ ಮತ್ತು ಸಂಗಡಿಗರು ಹೊರಗೆ ಬರುವ ವೇಳೆಯಲ್ಲಿ ಪೋಲೀಸರು ಲಘು ಲಾಠೀ ಪ್ರಹಾರಮಾಡಿ ಜನರನ್ನು ಚದುರಿಸಿದ್ದರು. ಎಸ್. ಪಿ. ಯವರು ಪೋಲೀಸ್ ಪೇದೆಗಳ ಸಹಾಯದೊಂದಿಗೆ ಶವವನ್ನು ಪೋಲೀಸ್ ವ್ಯಾನಿನಲ್ಲಿ ಎತ್ತಿಹಾಕಿ, ಧ್ವನಿವರ್ಧಕದ ಮೂಲಕ ಮೃತ ಶಂಭುವಿನ ಸಂಬಂಧಿಕರನ್ನು ಕರೆಯುತ್ತಿದ್ದರು. ಎಸ್. ಪಿ. ಯವರು ಕಾಂ. ಕೇಶವರನ್ನು ಕರೆದುಕೊಂಡು ಇತರ ಪೋಲೀಸ್ ಸಿಬ್ಬಂದಿಗಳೊಂದಿಗೆ ಶವಸಂಸ್ಕಾರ ನಡೆಯುವ ಸ್ಥಳಕ್ಕೆ ಕರೆದೊಯ್ದರು. ನಂದೀಪುರದಲ್ಲಿರುವ ಸಾರ್ವಜನಿಕ ಸ್ಮಶಾನದಲ್ಲಿ ಎಸ್. ಪಿ. ಯವರೇ ಸ್ವತಃ ಗುಂಡಿತೋಡಿ ಪೋಲೀಸರ ಸಹಾಯದೊಂದಿಗೆ ಶವವನ್ನು ದಫನ ಮಾಡಿದರು.

ಇದರ ಬಗ್ಗೆ ನಿಷ್ಪಕ್ಷವಾದ ತನಿಖೆ ನಡೆಯಿಸಲಾಗುವುದೆಂದು ಎಸ್. ಪಿ. ಯವರು ಮತ್ತು ಜಿಲ್ಲಾಧಿಕಾರಿಗಳು ಕಾಂ. ಎ. ಸಿ. ಕೇಶವರಿಗೆ ಆಶ್ವಾಸನೆ ಕೊಟ್ಟಿರುತ್ತಾರೆ.

○

ನೂತನ ಕಾರ್ಯಕಾರಿ ಸಮಿತಿ

ಭಾರತ ವಿದ್ಯಾರ್ಥಿ ಫೆಡರೇಶನ್ ತಿಪಟೂರು ಶಾಖೆ ತಾ. 27-11-79 ರಂದು ಕಾಂ. ಎಸ್. ಎನ್. ಮಲ್ಲಿಕಾರ್ಜುನಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಂಘಟನೆಯನ್ನು ಮತ್ತಷ್ಟು ಬಲಪಡಿಸಲು, ಸಾಹಿತ್ಯ, ವಿಚಾರ ವಿಮರ್ಶೆ ಹಾಗೂ ನಿಧಿ ಸಂಗ್ರಹಣೆಯ ಕೆಲಸವನ್ನು ಚುರುಕುಗೊಳಿಸಬೇಕೆಂದು ತೀರ್ಮಾನಿಸಲಾಯಿತು.

ನೂತನವಾಗಿ ಆಯ್ಕೆಯಾದ ಕಾರ್ಯಕಾರಿ ಸಮಿತಿ ಹೀಗಿದೆ; ಅಧ್ಯಕ್ಷ: ಎಸ್. ಎನ್. ಮಲ್ಲಿಕಾರ್ಜುನಯ್ಯ, ಉಪಾಧ್ಯಕ್ಷ: ಪಾಪಣ್ಣ, ಕಾರ್ಯದರ್ಶಿ: ಎಮ್. ಎಸ್. ಜಯಶಂಕರ್, ಖಜಾಂಚಿ: ಆರ್. ಲಿಂಗರಾಜಪ್ಪ, ಸದಸ್ಯರು: ಹೊನ್ನೇಗೌಡ, ಕೃಷ್ಣಾಚಾರ್ಯ, ಬಸವರಾಜು, ನಾಗರಾಜು, ಎಂ. ಎನ್. ತಮ್ಮಣ್ಣ, ಪುಟ್ಟಸ್ವಾಮಿ, ರಾಜಶೇಖರ್ ಹಾಗೂ ನಾಗಯ್ಯ.

ಸಭೆಯಲ್ಲಿ ಕಾಂ. ಚಿನ್ನಬಸವಣ್ಣ, ಕಾಂ. ದಯಾಮಯ ಮತ್ತು ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ ಹಾಜರಿದ್ದರು.

○

ಲೋಕಸಭಾ ಚುನಾವಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಎಸ್. ಎಫ್. ಐ. ನಿರ್ಧಾರ

ದಿನಾಂಕ 29-11-79 ರಂದು ಬೆಂಗಳೂರಿನಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ರಾಜ್ಯ ಸಮಿತಿ ಸಭೆಯು ಜರುಗಿ ಈ ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿದೆ. ಅಖಿಲ ಭಾರತ ಅಧ್ಯಕ್ಷರಾದ ಕಾಂ. ಬೇಬಿ ಅಲೆಕ್ಸಾಂಡರ್‌ರವರು ಸಭೆಯಲ್ಲಿ ಭಾಗವಹಿಸಿದ್ದರು.

1. ಲೋಕಸಭೆಯ ಮಧ್ಯಂತರ ಚುನಾವಣೆಯಲ್ಲಿ ಎಸ್.ಎಫ್.ಐ. ಈ ಬಾರಿ ಸಂಘದಹೆಸರಿನಲ್ಲಿ ನೇರ ಪ್ರಚಾರ ನಡೆಸುತ್ತದೆ. ವಿದ್ಯಾರ್ಥಿಗಳೂ ಸಮಾಜದ ಒಂದು ಭಾಗವಾಗಿದ್ದು, ಬೆಲೆ ಏರಿಕೆ, ನಿರುದ್ಯೋಗ ಮುಂತಾದ ಸಮಸ್ಯೆಗಳು ವಿದ್ಯಾರ್ಥಿಗಳಿಗೂ ಸಂಬಂಧಿಸಿದ್ದು, ವಿದ್ಯಾಭ್ಯಾಸದ ಪದ್ಧತಿಯಲ್ಲಿ ಶಿಕ್ಷಣ ಸೌಲಭ್ಯಗಳನ್ನು ನೀಡುವಲ್ಲಿ, ಪ್ರಗತಿಪರ ಬದಲಾವಣೆ ಮಾಡುವಲ್ಲಿ, ಸರ್ಕಾರಗಳ ನೀತಿಗಳೂ ಕಾರಣವಾಗಿರುವುದರಿಂದ ದೇಶದಲ್ಲಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ವಿದ್ಯಾರ್ಥಿಗಳೂ ಗಂಭೀರ ಗಮನ ಹರಿಸಬೇಕೆಂದು ಫೆಡರೇಷನ್ ಕರೆ ನೀಡಿದೆ. ಈ ಬಾರಿಯ ಚುನಾವಣೆಯಲ್ಲಿ ಸರ್ವಾಧಿಕಾರಿ ಮತ್ತು ಜಾತೀಯವಾದಿ ಶಕ್ತಿಗಳ ವಿರುದ್ಧ ಸಂಘದ ಕಾರ್ಯಕರ್ತರು ಹಳ್ಳಿಹಳ್ಳಿಗೂ ತೆರಳಿ, ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಹಾಗೂ ಆರ್.ಎಸ್.ಎಸ್. ಪ್ರಾಬಲ್ಯದ ಜನತಾ ಪಕ್ಷದ ಅಭ್ಯರ್ಥಿಗಳನ್ನು ಸೋಲಿಸಲು ಪ್ರಚಾರ ನಡೆಸುತ್ತದೆ. ಈ ಕಾರ್ಯಕ್ರಮಕ್ಕೆ ರಾಜ್ಯದ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು, ತನು-ಮನ ಧನಗಳ ಮೂಲಕ ಸಹಕಾರ ನೀಡಬೇಕಾಗಿ ಕೋರುತ್ತೇವೆ.

2. ಪ್ರಥಮ ಪಿ.ಯು.ಸಿ. ಪಬ್ಲಿಕ್ ಪರೀಕ್ಷೆಯನ್ನು ರದ್ದು ಮಾಡುವ ಪಿ.ಯು.ಸಿ. ಬೋರ್ಡ್ ಕ್ರಮವನ್ನು ಸಭೆಯು ವಿರೋಧಿಸಿ ಈ ಕ್ರಮವನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಲಾಗಿದೆ. ಸಮಾಜದ ಸಮಸ್ಯೆಗಳಿಂದ ದೂರವಾಗಿರುವ ಅವೈಜ್ಞಾನಿಕ ಮತ್ತು ಗುಮಾಸ್ತಗಿರಿ ಶಿಕ್ಷಣದಿಂದ ಈಗಾಗಲೇ ಬೇಸರ ಹೊಂದಿರುವ ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆ ಬದಲು ತರಗತಿ ಪರೀಕ್ಷೆ ನಡೆಸಿದಲ್ಲಿ ಅವರ ನಿರಾಸಕ್ತಿಯು ಇನ್ನೂ ಹೆಚ್ಚಾಗುತ್ತದೆ. ಶೋಷಣೆ, ಅನ್ಯಾಯ ಮತ್ತು ಭ್ರಷ್ಟಾಚಾರದ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟನೆ ಮಾಡದಂತೆ ವಿದ್ಯಾಸಂಸ್ಥೆಗಳ ಆಡಳಿತ ವರ್ಗವು ಒಂದೆಡೆ, ವೈಯುಕ್ತಿಕ ದ್ವೇಷ ಸಾಧನೆಗಾಗಿ ಹಿತಾಸಕ್ತ ಅಧ್ಯಾಪಕರುಗಳು ಇನ್ನೊಂದೆಡೆ, ಸ್ಥಳೀಯ ಮೌಲ್ಯಮಾಪನದ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ವಿದ್ಯಾರ್ಥಿಗಳನ್ನು ಇವರು ಮಾನಸಿಕ ಗುಲಾಮರನ್ನಾಗಿಸುತ್ತಾರೆ. ಈ ಕಾರಣದಿಂದ ಪಬ್ಲಿಕ್ ಪರೀಕ್ಷೆಯೇ ವಿದ್ಯಾರ್ಥಿಗಳಿಗೆ ಕ್ಷೇಮಕರವೆಂಬ ಕಾರಣದಿಂದ ಈ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.

3. ನಗರದಲ್ಲಿ ನಡೆಯುತ್ತಿರುವ ವೈಕೋ ಕಾರ್ಮಿಕರ ಹೋರಾಟಕ್ಕೆ ಫೆಡರೇಷನ್ ಬೆಂಬಲ ವ್ಯಕ್ತಪಡಿಸಿದೆ. ಸರ್ಕಾರವು ಮುಷ್ಕರ ನಿಷೇಧಿಸಿ ಹೊರಡಿಸಿರುವ ಜನ ವಿರೋಧಿ ಆಜ್ಞೆಯನ್ನು ಮತ್ತು ಮ್ಯಾನೇಜ್‌ಮೆಂಟ್ ಬಾಲಬಡುಕರ ಸಂಘದ ಪ್ರಧಾನ ಕಾರ್ಯದರ್ಶಿಯವರ ಮೇಲೆ ನಡೆಸಿದ ಹಲ್ಲೆಯನ್ನು ಸಭೆಯು ತೀವ್ರವಾಗಿ ಖಂಡಿಸಿದೆ. ಡಿಸೆಂಬರ್ ಮೂರರಂದು "ಬೆಂಗಳೂರು ಬಂದ್" ಆಚರಿಸಲು ನೀಡಿರುವ ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿಯ ಕರೆಗೆ ಫೆಡರೇಷನ್ ಸಂಪೂರ್ಣ ಬೆಂಬಲ ನೀಡಿದೆ.

4) ಕನ್ನಡವನ್ನು ಆಡಳಿತ ಭಾಷೆಯೆಂದು ಘೋಷಿಸಿದ್ದರೂ ರಾಜ್ಯದ ಬಹುಪಾಲು ಕಾಲೇಜುಗಳಲ್ಲಿ ಬಿ.ಎ. ತರಗತಿಗಳೂ ಸಹ ಕನ್ನಡದಲ್ಲಿ ಲಭ್ಯವಾಗುತ್ತಿಲ್ಲ. ಆದ್ದರಿಂದ ಶಿಕ್ಷಣವನ್ನು ಎಲ್ಲಾ ಹಂತಗಳಲ್ಲೂ ಕನ್ನಡ ಮಾಧ್ಯಮದಲ್ಲೇ ನೀಡಬೇಕೆಂಬ ಬೇಡಿಕೆಯಿದ್ದರೂ, ತಕ್ಷಣದಲ್ಲಿ ಪ್ರತಿಯೊಂದು ಕಾಲೇಜಿನಲ್ಲಿಯೂ ಕಲಾ ವಿಭಾಗವನ್ನಾದರೂ ಕನ್ನಡ ಮಾಧ್ಯಮದಲ್ಲಿ ಕಡ್ಡಾಯವಾಗಿ ನೀಡುವಂತೆ ಕ್ರಮ ತೆಗೆದುಕೊಳ್ಳಲು ಸರ್ಕಾರವನ್ನು ಸಭೆಯು ಒತ್ತಾಯಿಸಿದೆ.

ಸೀಮೆಎಣ್ಣೆ ಅಭಾವದ ವಿರುದ್ಧ ಪ್ರತಿಭಟನೆ

ತಾ. 24-11-79 ರಂದು ತುಮಕೂರು ಜಿಲ್ಲೆ, ತಿಪಟೂರಿನಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ ನೇತೃತ್ವದಲ್ಲಿ ಕಲ್ಪತರು ಕಾಲೇಜ್, ಟಿ. ಸಿ. ಹೆಚ್. ಕಾಲೇಜಿನ ವಿದ್ಯಾರ್ಥಿಗಳು, ಪುರಸಭಾ ನೌಕರರು, ಪಿ. ಡಬ್ಲ್ಯು. ಡಿ ಕೆಲಸಗಾರರು ಸೀಮೆಎಣ್ಣೆ ಅಭಾವದ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿದರು. ಖಾಲಿಡಬ್ಬಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಹಾದು ತಹಸೀಲ್ದಾರರ ಕಛೇರಿಗೆ ಬಂದು ಮನವಿ ಅರ್ಪಿಸಲಾಯಿತು.

ತಹಸೀಲ್ದಾರರು, ಪ್ರತಿಯೊಬ್ಬ ವಿದ್ಯಾರ್ಥಿಗೆ ತಿಂಗಳಿಗೆ ಆರು ಲೀಟರ್ ಸೀಮೆಎಣ್ಣೆ, ಅಕ್ಕಿ, ನೋಟ್‌ಬುಕ್, ಪೇಪರ್ ಇವುಗಳನ್ನು ರೇಷನ್ ಕಾರ್ಡ್ ಮುಖಾಂತರ ಕೊಡಿಸುವುದಾಗಿ ಭರವಸೆ ನೀಡಿದ್ದಾರೆ. ಮೆರವಣಿಗೆಯ ನೇತೃತ್ವವನ್ನು ಕಾಂ. ಆರ್. ಎಸ್. ಚನ್ನಬಸವಣ್ಣ (ರೈತ ಮುಖಂಡ), ಕಾರ್ಮಿಕ ಮುಖಂಡ ಎಸ್. ಕೆ. ದಯಾನಂದ, ವಿದ್ಯಾರ್ಥಿ ಮುಖಂಡರಾದ ಎಸ್. ಎನ್. ಮಲ್ಲಿಕಾರ್ಜುನಯ್ಯ, ಜಯಶಂಕರ್, ಹೆಚ್. ಸಿ. ಜಯಣ್ಣ, ಎಮ್. ಎನ್. ಕುಮಾರಸ್ವಾಮಿ, ಚಂದ್ರಶೇಖರ್ ಸಂಜೀವಶೆಟ್ಟಿ ಮುಂತಾದವರು ವಹಿಸಿದ್ದರು.

ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ. ರೈತ, ಕಾರ್ಮಿಕ, ವಿದ್ಯಾರ್ಥಿ ಮುಖಂಡರು ಮಾತನಾಡಿದರು. ಕಾಂ. ಅಪ್ಪಾಜಿ ವಂದನಾರ್ಪಣೆ ಮಾಡಿದರು.

.... ಆಳುವ ಪಕ್ಷಗಳ ಪರದಾಟ

[4ನೇ ಪುಟದಿಂದ]

ನೆಯನ್ನೇಕೆ ವಿರೋಧಿಸುತ್ತಿಲ್ಲ? ಆದರ ವಿರುದ್ಧ ಪ್ರತಿಭಟನೆಯ ಸ್ವರವನ್ನೂ ಯಾಕೆ ಎತ್ತುತ್ತಿಲ್ಲ? ಸಿ. ಪಿ. ಐ. (ಎಂ) ಕೇರಳದಲ್ಲಿ ಕಾಂಗ್ರೆಸ್ಸನ್ನು ಒಡೆಯುವುದರಲ್ಲಿ ನಿರತವಾಗಿತ್ತೆಂದೂ ಎ. ಕೆ. ಅಂಟೋನಿ ಆರೋಪಿಸಿದ್ದರು. ಈಗ ಇಂದಿರಾ ಕಾಂಗ್ರೆಸ್ಸಿನ ಮುಂದಾಳುಗಳು ಕೆ. ಪಿ. ಸಿ. ಸಿ. ಯ ಧೋರಣೆಯ ವಿರುದ್ಧ ಬಹಿರಂಗ ಹೇಳಿಕೆಗಳನ್ನು ನೀಡುವಂತೆ ಕಾಂಗ್ರೆಸ್ ಶಾಸಕರನ್ನು ಪ್ರಚೋದಿಸುತ್ತಿದ್ದಾರೆ. ಇದು ಕಾಂಗ್ರೆಸ್ಸನ್ನು ವಿಭಜಿಸುವ ತಂತ್ರವಲ್ಲವೆ? ಇದರ ಬಗ್ಗೆ ಕಾಂಗ್ರೆಸ್ ಮುಖಂಡರು ಯಾಕೆ ಮೌನವಹಿಸಿದ್ದಾರೆ? ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ಸಿನ ಕಣ್ಣಾನೂರು ಮತ್ತು ಕಲ್ಲಿಕೋಟೆ ಜಿಲ್ಲಾ ಸಮಿತಿಗಳು ಕೆ. ಪಿ. ಸಿ. ಸಿ. ತಳೆದಿರುವ ನಿಲುವೆಯನ್ನು ಪ್ರತಿಭಟಿಸಿ ನಿರ್ಣಯಗಳನ್ನು ಅಂಗೀಕರಿಸುವುದರೊಂದಿಗೆ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯು ಎಡ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳ ಒಕ್ಕೂಟಕ್ಕೆ ಮರಳಿ ಬರಬೇಕೆಂದೂ ಒತ್ತಾಯಿಸಿದ್ದಾರೆ.

(ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಶಕ್ತಿಗಳ ಒತ್ತಾಯಕ್ಕೆ ಮತ್ತು ರಾಷ್ಟ್ರೀಯ ಅವಶ್ಯಕತೆಗೆ ಮಣಿದು ಇದೀಗ ಅಂಟೋನಿಯವರ ಕಾಂಗ್ರೆಸ್ ಕೋಯಾ ಮಂತ್ರಿ ಮಂಡಳಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುದರ ಹಿನ್ನೆಲೆಯಲ್ಲಿ ಕೇರಳ ವಿಧಾನ ಸಭಾ ವಿಸರ್ಜನೆಯಾಗಿದೆ. ಅಂಟೋನಿ ಕಾಂಗ್ರೆಸ್ ತಡವಾಗಿಯಾದರೂ ತೆಗೆದುಕೊಂಡ ನಿಲುವೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸ್ವಾಗತಿಸಿದೆ).

ಕ್ರಿಯಾಸಮಿತಿ ಹೋರಾಟಕ್ಕೆ ಬೆಂಬಲ

ತಾ. 28.11.79 ರಂದ ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು ಕಛೇರಿ ಎದುರು 'ನೊಂದವರ ಕ್ರಿಯಾ ಸಮಿತಿ' ನೇತೃತ್ವದಲ್ಲಿ ಬಡ ಜನತೆ ಧರಣಿ ಮುಷ್ಕರ ಪ್ರಾರಂಭಿಸಿರುವುದನ್ನು ಮಾರ್ಕ್ಸ್‌ವಾದಿಕಮ್ಯುನಿಸ್ಟ್ ಪಕ್ಷ ಸಕಲೇಶಪುರ ಶಾಖೆ ಕಾರ್ಯದರ್ಶಿ ಕಾಂ. ಸುಕುಮಾರ್, ಮಂಜ್ರಾಬಾದ್ ರೈತ ಸಂಘದ ಮುಖಂಡ ಹೆಚ್.ಕೆ.ಅಮೀರ್ ಜಾನ್ ಹಾಗೂ ತೋಟ ಕಾರ್ಮಿಕರ ಸಂಘದ ಮುಖಂಡ ಕಾಂ. ಪಾಲ್ ಯ್ಯಾಜಿನ್ ಡಿಸೋಜ ಸ್ವಾಗತಿಸಿದ್ದಾರೆ.

ಹಲವಾರು ಕಡೆ ಒತ್ತುವರಿಗಳ ಮೂಲಕ, ಗ್ರಾಂಟುಗಳ ಮೂಲಕ ಹರಿಜನ ಮತ್ತು ಬಡ ಜನರ ಮುಂದಾಳುಗಳೆಂದು ಹೇಳಿಕೊಳ್ಳುವವರು ತಮ್ಮ ಹೆಸರಿಗೆ ಜಮೀನು ಮಾಡಿಸಿಕೊಂಡಿದ್ದಾರೆ. ಭೂ ನ್ಯಾಯಮಂಡಳಿಗಳಲ್ಲಿ ಹಾಗೂ ದರಖಾಸ್ತು ಕಮಿಟಿಗಳಲ್ಲಿ ಕೇವಲ ಪ್ರಭಾವೀ ವ್ಯಕ್ತಿಗಳ ಕೆಲಸ ನಡೆಯುತ್ತಿದೆ. ಶ್ರೀಮಂತರು ಅಕ್ರಮ ಒತ್ತುವರಿ ಮಾಡಿಕೊಂಡಿರುವ ಜಮೀನು, ಸರ್ಕಾರಿ ಹೆಚ್ಚುವರಿ ಜಮೀನು ಹಾಗೂ ಗೇಣಿದಾರರು ಸಾಗುವಳಿ ಮಾಡುತ್ತಿರುವ ಜಮೀನುಗಳನ್ನು ಕೂಡಲೇ ಅವರ ಹೆಸರುಗಳಿಗೆ ಮಂಜೂರುಮಾಡಲು ಸರಕಾರ ತುರ್ತುಕ್ರಮ ಕೈಗೊಳ್ಳಬೇಕೆಂದು ಮೇಲ್ಕಾಣಿಸಿದ ಮುಂದಾಳುಗಳು ಒತ್ತಾಯಿಸಿದ್ದಾರೆ.

ಸರಕಾರದ ಕಾರ್ಮಿಕ ವಿರೋಧಿ ನೀತಿಯ ಖಂಡನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಶಾಖೆ ತಾ. 29-11-79 ರಂದು ಕಾ. ಜಿ. ಪಾಪಣ್ಣನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ರಾಜ್ಯಸಮಿತಿ ಮುಖಂಡ ಕಾಂ. ಎನ್. ಎಲ್. ಉಪಾಧ್ಯಾಯರು ಸಹಾ ಸಭೆಯಲ್ಲಿ ಹಾಜರಿದ್ದರು.

ಸಭೆಯು ವೈಕೋ ಕಾರ್ಮಿಕರ ಹೋರಾಟ, ಬೇಡಿಕೆಗಳನ್ನು ಪರಿಶೀಲಿಸಿ, ಸರಕಾರ ಮುಷ್ಕರ ನಿಷೇಧಿಸಿ ಹೊರಡಿಸಿರುವ ಆಜ್ಞೆಯನ್ನು ಖಂಡಿಸಿತು. ಸರಕಾರ, ಅದರಲ್ಲೂ ಮುಖ್ಯಮಂತ್ರಿ ಶ್ರೀ ದೇವರಾಜ ಅರಸರು ಮಧ್ಯೆ ಪ್ರವೇಶಮಾಡಿ ಕಾರ್ಮಿಕರ ಸಮಸ್ಯೆಗಳನ್ನು ಇತ್ಯರ್ಥಪಡಿಸುವ ಬದಲು, ನಿಷೇಧಾಜ್ಞೆ ಹೊರಡಿಸಿರುವುದು ಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಂಡಂತಾಗಿದೆ. ಸರ್ವಾಧಿಕಾರಿ ಮೌಲ್ಯಗಳಿಗೆ ವಿರುದ್ಧವೆಂದು ಹೇಳಿಕೊಳ್ಳುವ ಸರಕಾರ ಈ ಕೂಡಲೇ ನಿಷೇಧಾಜ್ಞೆಯನ್ನು ವಾಪಸು ಪಡೆದುಕೊಂಡು, ಕಾರ್ಮಿಕರಿಗೆ ನ್ಯಾಯ ದೊರಕಿಸಬೇಕೆಂದು ಸಭೆ ಒತ್ತಾಯಪಡಿಸಿದೆ.

ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ, ಸರ್ವಾಧಿಕಾರವನ್ನು ಪ್ರತಿನಿಧಿಸುವ ಇಂದಿರಾ ಕಾಂಗ್ರೆಸ್ ಹಾಗೂ ಜಾತೀಯವಾದಿಗಳನ್ನು ಪ್ರತಿನಿಧಿಸುವ ಜನತಾಪಕ್ಷವನ್ನು ಸೋಲಿಸಲು ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಜಿಲ್ಲೆಯಲ್ಲಿ ಒಂದಾಗಿ ದುಡಿಯಬೇಕೆಂದು ಸಭೆ ಕರೆ ನೀಡಿದೆ

ಜಿಲ್ಲೆಯಲ್ಲಿ ಪ್ರಬಲವಾಗಿರುವ ಮೆದುಳು ಜ್ವರ ತಡೆಗೆ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮ ಏನೇನೂ ಸಾಲದೆಂದು ಸಭೆ ಅಭಿಪ್ರಾಯಪಟ್ಟಿತು. ಡಿ. ಡಿ. ಟಿ. ಸಿಂಪಡಿಸುವ ಕ್ರಮ ತುಂಬಾ ಅತೃಪ್ತಿಕರ, ಆರೋಗ್ಯ ಇಲಾಖೆಯವರು ತರಿಸಿರುವ 1000 ಸಿ. ಸಿ. ವ್ಯಾಕ್ಸೀನು ಕೇವಲ ಒಂದು ತಾಲ್ಲೂಕಿಗೆ ಸಾಕಾಗಬಹುದಾದ್ದರಿಂದ ಮಕ್ಕಳ ಪ್ರಾಣವನ್ನು ಉಳಿಸಲು ಅಧಿಕಾರಿಗಳು ಸೂಕ್ತ ಕ್ರಮವಹಿಸಬೇಕೆಂದು ಸಭೆ ಕೇಳಿಕೊಂಡಿದೆ.

ಸೀಮೆಎಣ್ಣೆ, ಸಕ್ಕರೆ, ಡೀಸೆಲ್ ಅಭಾವದಿಂದಾಗಿ ಜನತೆಯು ಕಷ್ಟ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಹಳ್ಳಿಗಳಲ್ಲಿ ಬಡವರು ದೀಪಗಳಿಲ್ಲದೆಯೇ ಜೀವಿಸಬೇಕಾಗಿದೆ. ಸಕ್ಕರೆ ಕೆ. ಜಿ.ಗೆ ರೂ. 4ರಿಂದ5. ಪೆಟ್ರೋಲ್ ಬಂಕ್‌ಗಳಿಂದ ಡೀಸೆಲ್ ಸಹಾ ನಾಪತ್ತೆ. ಆದ್ದರಿಂದ ಸರಕಾರಿ ಅಧಿಕಾರಿಗಳು ಕೂಡಲೇ ಗಮನಹರಿಸಿ ಪ್ರತಿಯೊಂದು ಕುಟುಂಬಕ್ಕೆ ತಿಂಗಳಿಗೆ 15 ಲೀಟರ್ ಸೀಮೆಎಣ್ಣೆ, ನ್ಯಾಯ ಬೆಲೆಯಲ್ಲಿ ಸಕ್ಕರೆ ಮತ್ತು ರೈತರಿಗೆ ಸಾಕಷ್ಟು ಡೀಸೆಲ್ ಸಿಗುವಂತೆ ಮಾಡಬೇಕೆಂದು ಕಾಂ; ಎನ್. ಎಲ್. ಉಪಾಧ್ಯಾಯ ಹಾಗೂ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ. ಸವರಿದಾಸ್‌ರವರು ತಾ. 29-11-79ರಂದು ಜಿಲ್ಲಾಧಿಕಾರಿಗಳಿಗೆ ಭೇಟಿಮಾಡಿ ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಾದ್ಯಂತ ಯಶಸ್ವಿ ಮುಷ್ಕರ

ಸಿ. ಐ. ಟಿ. ಯು. ಗೆ ಸೇರಿದ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಆಶ್ರಯದಲ್ಲಿ 30-11-79 ರಂದು ಕೊಡಗಿನಾದ್ಯಂತ ಯೂನಿಯನ್ ಸದಸ್ಯರು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿದರು. ತಮ್ಮ 8 ಅಂಶಗಳ ಬೇಡಿಕೆಯನ್ನಿಟ್ಟು ತೋಟ ಕಾರ್ಮಿಕರು, ಪಿ.ಡಬ್ಲ್ಯು.ಡಿ. ಗ್ಯಾಂಗ್‌ಮನ್‌ಗಳು ಚೆಟ್ಟಳ್ಳಿಯ ತೋಟಗಾರಿಕಾ ಸಂಶೋಧನಾಲಯದ ಕಾರ್ಮಿಕರು ಮೆರವಣಿಗೆ ಹಾಗೂ ಬಹಿರಂಗ ಸಭೆಗಳನ್ನು ನಡೆಸಿದರು.

ಮುಷ್ಕರದ ಅಂಗವಾಗಿ ಕುಟ್ಟ, ಕೆ. ಕೆ. ಆರ್. (ಬಿ. ಶೆಟ್ಟಿಗೇರಿ), ಪೊನ್ನಂಪೇಟೆ, ತಿತಿಮತಿ, ಚೆಟ್ಟಳ್ಳಿ ಮತ್ತು ಸೋಮವಾರಪೇಟೆಯಲ್ಲಿ ಮೆರವಣಿಗೆ ಹಾಗೂ ಬಹಿರಂಗ ಸಭೆಗಳು ನಡೆದವು.

ಕುಟ್ಟದಲ್ಲಿ ಯೂನಿಯನ್ ಸದಸ್ಯತ್ವವಿರುವ ತೋಟಗಳ ಕಾರ್ಮಿಕರು ಮತ್ತು ಕುಟ್ಟದ ಸುತ್ತಮುತ್ತಲಿನ ಕೃಷಿ ಕಾರ್ಮಿಕರು ಮತ್ತು ಹಿತ್ತಿಲಿಗರು ಸುಮಾರು 500 ಮಂದಿ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ಪಂಚಾಯ್ತಿ ಸದಸ್ಯರಾದ ಕಾಂ. ಮುತ್ತು ವಹಿಸಿದ್ದರು. ಚೆಟ್ಟಳ್ಳಿಯ ಕಾಂ. ಅಂಟೋನಿ ದಾಸ್, ವೀರಾಜಪೇಟೆಯ ವಕೀಲರಾದ ಕಾಂ. ಪ್ರಮೋದ್, ಯೂನಿಯನ್‌ನ ಅಧ್ಯಕ್ಷರಾದ ಕಾಂ. ಕೆ. ಎ. ಮುತ್ತಪ್ಪ, ಯೂನಿಯನ್‌ನ ಸಹ ಕಾರ್ಯದರ್ಶಿ ಕಾಂ. ಕುಟ್ಟಪ್ಪ, ಪೊನ್ನಂಪೇಟೆಯ ಕಾಂ. ಸುಬ್ಬಯ್ಯ ಮುಂತಾದವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಚೆಟ್ಟಳ್ಳಿಯಲ್ಲಿ ನಡೆದ ಬಹಿರಂಗ ಸಭೆಗೆ ಆನಂದಪುರದಿಂದ ಮೆರವಣಿಗೆ ಹೊರಟು ಸಿದ್ದಾಪುರ ಮಾರ್ಗವಾಗಿ 11 ತೋಟಗಳಿಂದ ಸುಮಾರು ಸಾವಿರಕ್ಕೂ ಮೇಲ್ಪಟ್ಟ ಕಾರ್ಮಿಕರು ಮೆರವಣಿಗೆಯಲ್ಲಿ ಚೆಟ್ಟಳ್ಳಿ ತಲುಪಿದರು. ಶುಂಠಿಕೊಪ್ಪದ ಬಾಳೆಕಾಡ್ ಎಸ್ಟೇಟ್‌ನಿಂದ ಮೆರವಣಿಗೆ ಹೊರಟು ಚೆಟ್ಟಳ್ಳಿಯ ತೋಟಗಾರಿಕಾ ಕೇಂದ್ರದ ಕಾರ್ಮಿಕರೊಂದಿಗೆ ಚೆಟ್ಟಳ್ಳಿ ತಲುಪಿದರು. ಇದರಲ್ಲಿ ಐನೂರಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು. ಸಂಜೆ 3-30 ಗಂಟೆಗೆ ಸಭೆ ಪ್ರಾರಂಭವಾಯಿತು. ಯೂನಿಯನ್‌ನ ಕಾರ್ಯದರ್ಶಿಗಳಾದ ಡಾ. ಐ.ಆರ್. ಅಸ್ರಣ್ಣನವರು ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರಿನ ಕಾಂ ಜಿ. ರಾಮು, ಸುಳ್ಯದ ಕಾಂ. ಸೂರ್ಯನಾರಾಯಣ ಭಟ್ ಯೂನಿಯನ್‌ನ ಸಹ ಕಾರ್ಯದರ್ಶಿಗಳಾದ ಕಾಂ. ಕುಟ್ಟಪ್ಪ ಮತ್ತು ಕಾಂ.ಉದಯ ಕುಮಾರ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಒಟ್ಟು 1,500 ಕಾರ್ಮಿಕರು ಭಾಗವಹಿಸಿದ್ದರು.

ಟಿ. ಶೆಟ್ಟಿಗೇರಿಯ ಕೆ. ಕೆ. ಆರ್. ನಲ್ಲಿ ನಡೆದ ಮೆರವಣಿಗೆ ಮತ್ತು ಬಹಿರಂಗ ಸಭೆಯಲ್ಲಿ ಸುಮಾರು ಒಂದು ಸಾವಿರ ಕಾರ್ಮಿಕರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ವೀರಾಜಪೇಟೆಯ ವಕೀಲರಾದ ಕಾಂ. ಪ್ರಮೋದ್ ವಹಿಸಿದ್ದರು. ಶ್ರೀಮತಿ ಪ್ರಭಾ, ಕಾಂ. ಕೆ. ಎ. ಮುತ್ತಪ್ಪ, ಕಾಂ. ಚಂದ್ರನ್, ಕಾಂ. ಸುಬ್ಬಯ್ಯ ಮುಂತಾದವರು ಮಾತನಾಡಿದರು.

ತಿತಿಮತಿಯಲ್ಲಿ ಸುಮಾರು 500 ಕಾರ್ಮಿಕರು ಮೆರವಣಿಗೆ ಹಾಗೂ ಬಹಿರಂಗ ಸಭೆ ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ತಿತಿಮತಿಯ ಕಾಂ. ಎಂ. ಚಂಗಪ್ಪ ವಹಿಸಿದ್ದರು. ಕಾಂ. ಲಾಜರ್, ಕಾಂ. ಕೆ. ಎ. ಮುತ್ತಪ್ಪ, ಸುಬ್ಬಯ್ಯ ಮುಂತಾದವರು ಮಾತನಾಡಿದರು.

ಪೊನ್ನಂಪೇಟೆಯಲ್ಲಿ ಸುಮಾರು ನೂರು ಮಂದಿ ಪಿ. ಡಬ್ಲ್ಯು. ಡಿ. ಗ್ಯಾಂಗ್‌ಮನ್‌ಗಳು ಮೆರವಣಿಗೆ ನಡೆಸಿದರು.

ಸೋಮವಾರಪೇಟೆಯಲ್ಲಿ ಸುಮಾರು ನೂರು ಮಂದಿ ಪಿ.ಡಬ್ಲ್ಯು. ಡಿ. ಗ್ಯಾಂಗ್‌ಮನ್‌ಗಳು ಎಕ್ಸಿಕ್ಯೂಟಿವ್ ಎಂಜಿನಿಯರ್‌ರವರ ಕಛೇರಿಯ ಮುಂದೆ ಪ್ರದರ್ಶನ ನಡೆಸಿದರು. ಮನವಿ ಪತ್ರವನ್ನೂ ಸಲ್ಲಿಸಲಾಯಿತು. ಕಾರ್ಮಿಕರನ್ನುದ್ದೇಶಿಸಿ ಯೂನಿಯನ್ನಿನ ಸಹಕಾರ್ಯದರ್ಶಿ ಕಾಂ. ಲತೀಫ್ ಮಾತನಾಡಿದರು.

ಮುಷ್ಕರವನ್ನು ತಪ್ಪಿಸಲು ಜಿಲ್ಲೆಯ ಅನೇಕ ಭಾಗಗಳಲ್ಲಿ ಮ್ಯಾನೇಜ್‌ಮೆಂಟಿನವರು ನಾನಾ ರೀತಿಯ ತಂತ್ರಗಳನ್ನು ಪಯೋಗಿಸಿದರು. ಪೋಲೀಸರ ಮೂಲಕ ಕಾರ್ಮಿಕರನ್ನು ಬೆದರಿಸಿದರು. ಗೂಂಡಾಗಿರಿ ನಡೆಸಿದರು. ಆದರೆ ಕಾರ್ಮಿಕರ ಧೈರ್ಯದ ಎದುರು ಇವ್ಯಾವುದೂ ಫಲಿಸದೆ ಸಿ.ಐ.ಟಿ.ಯು. ಕಾರ್ಮಿಕರ ಮುಷ್ಕರ ಅತ್ಯಂತ ಜಯಪ್ರದವಾಗಿ ನಡೆದು ಜಿಲ್ಲೆಯ ಕಾರ್ಮಿಕ ಚಳುವಳಿಯಲ್ಲಿ ಒಂದು ಹೊಸ ಅಧ್ಯಾಯವನ್ನು ಸೃಷ್ಟಿಸಿದೆ.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಮಂತ್ರಿಗಳಿಗೆ ಪೌರ ಕಾರ್ಮಿಕರ ಮನವಿ

ಬಿಜಾಪುರದ ಪೌರ ಕಾರ್ಮಿಕರು ಕಳೆದ ಆರೇಳು ತಿಂಗಳಿಂದ ಹೋರಾಟ ನಡೆಸುತ್ತಿದ್ದಾರೆ. ಸರಕಾರದಿಂದ ಮಂಜೂರಾಗಿರುವ ಮೂರುತುಟ್ಟಿಭತ್ಯಗಳು ಇನ್ನೂ ಈ ಬಡ ಕಾರ್ಮಿಕರ ಪಾಲಿಗೆ ಎಟುಕದ ಹಣ್ಣಾಗಿಯೇ ಉಳಿದಿದೆ. ಅತ್ಯಂತ ಹೀನಾಯ ಸ್ಥಿತಿಯಲ್ಲಿರುವ ಪೌರ ಕಾರ್ಮಿಕರನ್ನು ನೋಡಿದರೆ, ಸರಕಾರ ದೀನ, ದಲಿತರ ಉದ್ಧಾರ ಮಾಡುತ್ತಿದ್ದೇವೆ ಎಂದು ಹಾಕಿರುವ ಘೋಷಣೆ, ಬರಹಗಳ ನಿಜ ಸ್ವರೂಪ ಗೊತ್ತಾಗುತ್ತದೆ. ನೆರೆ ರಾಜ್ಯಗಳಾದ ತಮಿಳುನಾಡು ಮತ್ತು ಮಹಾರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಪೌರ ಕಾರ್ಮಿಕರು ಅತಿಯಾಗಿ ಕಡೆಗಣಿಸಲ್ಪಟ್ಟಿದ್ದಾರೆ.

ಮೇಲ್ಕಾಣಿಸಿದ ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತರಲು ಬಿಜಾಪುರ ಮುನಿಸಿಪಲ್ ಕಾಮಗಾರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ವಿ. ಎಚ್. ಸೊನ್ನದ್‌ರವರ ನೇತೃತ್ವದಲ್ಲಿ ಕಾರ್ಮಿಕರು ತಾ. 25-11-79 ರಂದು ರಾಜ್ಯದ ಕಂದಾಯ ಮಂತ್ರಿ ಶ್ರೀ ಬಸವಲಿಂಗಪ್ಪನವರಿಗೆ ಮನವಿ ಅರ್ಪಿಸಿದ್ದಾರೆ. ಇನ್ನಾದರೂ ಸರಕಾರ ಕಣ್ಣು ತೆರೆಯುವುದೋ ನೋಡಬೇಕು.

○

ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ಮತ್ತು ವಸತಿ ಹೀನರಿಗೆ ಸೈಟುಗಳನ್ನು ಹಂಚುವಂತೆ ಒತ್ತಾಯಿಸಿ ಭಾರಿ ಪ್ರದರ್ಶನ

ದಿ. 3-12-79 ರಂದು ತುಮಕೂರು ಜಿಲ್ಲೆ ಕುಣಿಗಲ್‌ನಿಂದಸುಮಾರು 500 ಜನ ವಸತಿಹೀನರು ತುಮಕೂರಿಗೆ ಕಾಲ್ನಡಿಗೆಯಲ್ಲಿ ಜಾಥಾ ಬಂದು ತುಮಕೂರಿನ ಮನೆಯಿಲ್ಲದ ಬಡವರ ಜತೆ ಸೇರಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಸತ್ಯಾಗ್ರಹ ನಡೆಸಿದರು.

ನಂತರ ನಿಯೋಗವೊಂದು ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿ ಮೈಕೋ ನೌಕರರ ಬೇಡಿಕೆಗಳನ್ನು ಸರಕಾರ ಮಧ್ಯೆ ಪ್ರವೇಶಿಸಿ ಬಗೆಹರಿಸುವಂತೆಯೂ ಮತ್ತು ಕುಣಿಗಲ್ ಮತ್ತು ತುಮಕೂರುಗಳಲ್ಲಿ ಮನೆಯಿಲ್ಲದ ಬಡವರಿಗೆ ಸೈಟುಗಳನ್ನು ಹಂಚುವಂತೆ ಮನವಿ ಸಲ್ಲಿಸಿ ಜಿಲ್ಲಾಧಿಕಾರಿಗಳೊಡನೆ ಚರ್ಚಿಸಲಾಯಿತು. ಮೈಕೋ ನೌಕರರ ಬಗ್ಗೆ ನಿಯೋಗದ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸುವುದಾಗಿಯೂ, ಮನೆ ನಿವೇಶನಗಳನ್ನು ಹಂಚಲು ಕೂಡಲೇ ಕ್ರಮ ತೆಗೆದುಕೊಳ್ಳುವುದಾಗಿ ಜಿಲ್ಲಾಧಿಕಾರಿಗಳು ಭರವಸೆಕೊಟ್ಟ ನಂತರ ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಬಹಿರಂಗ ಸಭೆ ನಡೆಸಲಾಯಿತು.

ಈ ಸಭೆಯಲ್ಲಿ ಕಾಂ. ಹೆಚ್. ಸಿ. ಚೆನ್ನಪ್ಪ, ಕಾಂ. ದಸ್ತಗೀರ್, ಕಾಂ. ಕೆ. ಆರ್. ನಾಯಕ್‌ರವರುಗಳು ಮಾತನಾಡಿದರು. ಜಾಥಾದ ನೇತೃತ್ವವನ್ನು ಕಾಂ. ದಸ್ತಗೀರ್, ಕಾಂ. ಬಡೇಸಾಹೇಬ್, ಕಾಂ. ಯೂನಸ್‌ಖಾನ್ ರವರು ವಹಿಸಿದ್ದರು. ಸಾವಿರಾರು ಜನ ಹೆಂಗಸರು ಮಕ್ಕಳು ಸಹಿತ ಜಾಥಾದಲ್ಲಿ ಬಂದಿದ್ದರು.

○

ಕರ್ನಾಟಕ ಸಿಮೆಂಟ್ ಪೈಪ್ ಫ್ಯಾಕ್ಟರಿ ನೌಕರರ ಸಂಪು

ಕರ್ನಾಟಕಸಿಮೆಂಟ್‌ಪೈಪ್‌ಫ್ಯಾಕ್ಟರಿ ಪ್ರಾರಂಭವಾಗಿ 15 ವರ್ಷಗಳಾಗಿವೆ. ಇಂದಿಗೂ ಇಲ್ಲಿ ದುಡಿಯುವ ನೌಕರರು ದಿನಗೂಲಿಗಳು. 10-15 ವರ್ಷ ಸೇವೆ ಸಲ್ಲಿಸಿದವರಿಗೂ ರೂ. 200ಕ್ಕೂ ಮಿಕ್ಕಿ ಸಂಬಳವಿಲ್ಲ. ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೆ ಏರುತ್ತಿರುವ ಈ ದಿನಗಳಲ್ಲಿ ನೌಕರರು ಇಷ್ಟು ಕಡಿಮೆ ಸಂಬಳದಲ್ಲಿ ಜೀವನ ಸಾಗಿಸುವುದೆಂತು ?

ಈ ಕಾರ್ಖಾನೆಯ ಕಾರ್ಮಿಕರು ನಗರ ಕಾರ್ಮಿಕರ ಸಂಘದ ಸದಸ್ಯರಾಗಿ, ನೌಕರರನ್ನು ಖಾಯಂಗೊಳಿಸುವುದು, ವೇತನ ಹೆಚ್ಚಳ, ತುಟ್ಟಿಭತ್ತೆ, ರಜೆ, ಗ್ರಾಚ್ಯುಟಿ ಮೊದಲಾದ ಬೇಡಿಕೆಗಳನ್ನಿಟ್ಟು ಈಗ ಸುಮಾರು 5 ತಿಂಗಳುಗಳಾದವು. ಅಧ್ಯಕ್ಷರಾದ ಕಾಂ. ಸ್ಥಳೇಕರ್‌ರವರು ಅನೇಕ ಸಲ ಮಾಲಕರನ್ನು ಭೆಟ್ಟಿಯಾಗಿ ಮಾತುಕತೆ ನಡೆಸಲು ಮುಂದಾದರೂ ಮಾಲಕರು ಮಾತುಕತೆಗಳನ್ನು ಏನಾದರೂ ನೆವದಿಂದ ಮುಂದೆ ಹಾಕುತ್ತಾ ಬಂದಿದ್ದಾರೆ. ಕಾರ್ಮಿಕರು ಇಷ್ಟು ದಿವಸ ತಾಳ್ಮೆಯಿಂದ ದಾರಿ ಕಾಯ್ದರೂ ಯಾವ ಪರಿಣಾಮವಾಗದೇ ಹೋಯಿತು. ಬೇರೆ ದಾರಿ ಇಲ್ಲದೆ ಕಾರ್ಮಿಕರು ತಾ. 3-12-79 ರಿಂದ ಅನಿವಾರ್ಯವಾಗಿ ಅನಿರ್ದಿಷ್ಟ ಅವಧಿಯ ಸಂಪಿನ ನಿರ್ಣಯವನ್ನು ಕೈಗೊಂಡಿದ್ದಾರೆ.

ಕಾರ್ಮಿಕರ ಈ ನ್ಯಾಯವಾದ ಹೋರಾಟವನ್ನು ನಗರ ಕಾರ್ಮಿಕರು ಹಾಗೂ ಸಹೃದಯ ಸಾರ್ವಜನಿಕರೆಲ್ಲ ಬೆಂಬಲಿಸಬೇಕು ಹಾಗೂ ನ್ಯಾಯ ದೊರಕಿಸಿಕೊಡುವಲ್ಲಿ ಸಹಾಯ ಮಾಡಬೇಕೆಂದು ಸಂಘದ ಕಾರ್ಯದರ್ಶಿಕಾಂ. ಅಣ್ಣರಾಯಈಳಗೇರ್‍ರವರು ವಿನಂತಿ ಮಾಡಿದ್ದಾರೆ.

ಕಂಕನಾಡಿ 'ಬಿ' ಗ್ರಾಮ ನಾಗರಿಕ ಸಮಿತಿಯ ಸಭೆ

ಕಂಕನಾಡಿ 'ಬಿ' ಗ್ರಾಮದ ನಾಗರಿಕ ಸಮಿತಿಯ ಸಭೆಯೊಂದು ತಾ. 4-12-79 ರಂದು ಕಂಕನಾಡಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಗ್ರಾಮದ ಸರ್ವತೋಮುಖ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಅದಕ್ಕಾಗಿ ಪರಿಶ್ರಮಿಸಲು ಎಂದೆ ಬಂದಿರುವ ಈ ಸಮಿತಿಯು, ಅತ್ಯಾವಶ್ಯಕ ಸಲಕರಣೆಗಳಿಲ್ಲದೆ ನಡೆಸುತ್ತಿರುವ ಇಲ್ಲಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ತಮ್ಮ ಅಳಿಲ ಸೇವೆಯನ್ನು ಸಲ್ಲಿಸುವ ಸಲುವಾಗಿ ಒಂದು ಹೊಸ ಗೋಡೆ ಗಡಿಯಾರವನ್ನು ಶ್ರೀಯುತ ಹಸನ್ನಬ್ಬಶೇಟ್‌ರವರ ಹಸ್ತದಿಂದ ಶಾಲಾ ಅಧ್ಯಾಪಕರಿಗೆ ಸಮರ್ಪಿಸಲಾಯಿತು.

ಶಾಲಾಭಿವೃದ್ಧಿ, ಗ್ರಾಮಾಭಿವೃದ್ಧಿ ಸಮಾಜ ಅಭಿವೃದ್ಧಿಯ ಬೃಹತ್ತಾದ ಉದ್ದೇಶವನ್ನಿಟ್ಟುಕೊಂಡು ಮುಂದುವರಿಯುವ ನಾಗರಿಕ ಸಮಿತಿಗೆ ಅಧ್ಯಾಪಕಿಯವರು ಶುಭವನ್ನು ಹಾರೈಸುತ್ತಾ ತಮ್ಮೆಲ್ಲರ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು.

ನಾಗರಿಕ ಸಮಿತಿಯ ಚಟುವಟಿಕೆಗಳಿಂದ ಹರ್ಷಿತರಾದ ಶ್ರೀಯುತ ಹಸನ್ನಬ್ಬಶೇಟ್ ಮತ್ತು ಶ್ರೀ ಭೋಜರವರು ಈ ಸಮಿತಿಗೆ ರೂ. 101 ಮತ್ತು ರೂ. 51ನ್ನು ಉದಾರ ಧಾನ ಮಾಡಿದರು.

ಸಭೆಯಲ್ಲಿ ಶ್ರೀ ಕೆ ಪಿ. ಎಸ್. ವಿ. ರಾವ್ (ಅಡ್ವಕೇಟ್) ರವರು ಮಾತನಾಡಿ ಸಮಿತಿಯ ಉದ್ದೇಶಗಳನ್ನು ವಿವರಿಸುತ್ತಾ ಗ್ರಾಮದ ಎಲ್ಲಾ ಜನರು ಒಂದಾಗಿ ಶ್ರಮಿಸಿದರೆ ಮಾತ್ರ ಯಾವುದೇ ಅವಶ್ಯಕತೆಗಳನ್ನು ಪಡೆಯಲು ಸಾಧ್ಯವೆಂದರು.

ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಬಿ. ಯಂ. ಮಾಧವನವರು ಮಾತನಾಡುತ್ತಾ ಸರಕಾರ ಪೇಪರಲ್ಲೂ, ಭಾಷಣದಲ್ಲೂ ತೋರಿಸುವ ಅಂಕಿ ಅಂಶಗಳಿಂದಾಗಲೀ, ವಿವಿಧ ಯೋಜನೆಗಳಿಂದಾಗಲೀ ಗ್ರಾಮೀಣ ಅಭಿವೃದ್ಧಿಯು ಈ ವರೆಗೆ ನಡೆಯಲಿಲ್ಲ, ಜನತೆಯು ತಾವಾಗಿ ಮುಂದೆಬಂದು ಸಂಘಟನೆಯನ್ನು ಕಟ್ಟಿ, ಹೋರಾಟದ ಕಣಕ್ಕಿಳಿದರೆ ಮಾತ್ರ ತಮಗೆ ಬೇಕಾದ ಅವಶ್ಯಕತೆಗಳನ್ನು ಈಡೇರಿಸಲು ಸಾಧ್ಯವಾಗುತ್ತದೆ ಮಾತ್ರವಲ್ಲ ಸಮಾಜದಲ್ಲಿ ಇಂದು ತಲೆದೋರುವ ಅಸಮಾನತೆಗಳ ನಿರ್ಮೂಲನ ಸಾಧ್ಯವಾಗುತ್ತದೆ.

ಅವರು ಮುಂದುವರಿದು ಕಂಕನಾಡಿ 'ಬಿ' ಗ್ರಾಮದ ಮಹಿಳೆಯರ ಅಭಿವೃದ್ಧಿಗೋಸ್ಕರ ಒಂದು ಮಹಿಳಾ ಸಂಘಟನೆಯನ್ನು ಬೆಳೆಸಬೇಕು ಎಂದು ಕರೆಯಿತ್ತರು.

○

ಯಶಸ್ವಿ ಬೆಂಗಳೂರು ಬಂದ್

[ಒಂದನೇ ಪುಟದಿಂದ]

ಪೋಲೀಸರ ಕ್ರಮ :

ಬಂದ್‌ಗೆ 1 ದಿನ ಮೊದಲೇ ಪೋಲೀಸರು ಪತ್ರಿಕಾ ಹೇಳಿಕೆ ನೀಡಿ 1 ಸಾವಿರ ಸಮಾಜಘಾತುಕ ಶಕ್ತಿಗಳನ್ನು ಬಂಧಿಸಿರುವುದಲ್ಲದೆ, ಬಂದ್‌ಗೆ ವಿರೋಧವಾಗಿರುವವರಿಗೆ ಸಂಪೂರ್ಣ ಪೋಲೀಸ್ ರಕ್ಷಣೆ ನೀಡುವುದಾಗಿ ತಿಳಿಸಿದ್ದರು. ಬಂದ್ ಶಾಂತಿಯುತವಾಗಿ ನಡೆಯಲು ಪೋಲೀಸರ ಸೂಕ್ತ ಕ್ರಮವೇ ಕಾರಣವೆಂದು ಬಹು ಜನರು ನಂಬುವಂತೆ ಬಂಡವಾಳಶಾಹಿ ಪತ್ರಿಕೆಗಳು ಬರೆದಿವೆ.

ವಾಸ್ತವಾಂಶವೆಂದರೆ, ಉಪ್ಪಾರಪೇಟೆ ಪೋಲೀಸ್ ಠಾಣೆಯೊಂದರಲ್ಲಿಯೇ ಸುಮಾರು 120 ಜನರು ಬಂಧಿತರಾಗಿದ್ದರು. ಅವರಲ್ಲಿ ಪೋಲೀಸರಿಗೆ ಚೆನ್ನಾಗಿ ಗೊತ್ತಿರುವ ವ್ಯಕ್ತಿಗಳ ಜೊತೆಯಲ್ಲಿ ಸಿನೆಮಾ ನೋಡಿ ಮನೆಗೆ ಹೋಗುತ್ತಿದ್ದವರು, ರಾತ್ರಿ 1 ಗಂಟೆಗೆ ಊಟಮಾಡಿ ನಡೆದು ಹೋಗುತ್ತಿದ್ದ ಕೂಲಿ ಹುಡುಗರು ಹಾಗೂ ಪೋಲೀಸ್ ಠಾಣೆಗೆ ದೂರು ಕೊಡಲು ಹೋದ ವ್ಯಕ್ತಿಗಳೇ ಅಧಿಕವಾಗಿದ್ದರು. ಈ ಬಗ್ಗೆ ಠಾಣೆಯ ಪೋಲೀಸ್ ಅಧಿಕಾರಿಗಳ ಗಮನ ಸೆಳೆದಾಗ ನಿರ್ಲಕ್ಷ್ಯದ ಉತ್ತರ ಬಂತು.

ಕಾರ್ಮಿಕ ಮುಖಂಡರ ಮೇಲೆ ಕಣ್ಣು :

ಸಮಾಜಘಾತುಕ ವ್ಯಕ್ತಿಗಳ ಹೆಸರಿನಲ್ಲಿ ರಾಜಕೀಯ ಪಕ್ಷಗಳಿಗೆ ಸೇರಿದ ಹಾಗೂ ಕಾರ್ಮಿಕ ಸಂಘಟನೆಗಳಿಗೆ ಸೇರಿದ ಅನೇಕರನ್ನು ಬಂಧಿಸಿ ಮಾಂಸ ಕಿತ್ತುಬರುವಂತೆ ಥಳಿಸಲಾಗಿದೆ. ಸಿ. ಐ. ಟಿ. ಯು. ಗೆ ಸೇರಿದ ಕಾಂ. ಕುಂಜಪ್ಪನ್, ಚಾಕೋ, ರಾಮಚಂದ್ರ, ನಾರಾಯಣಸ್ವಾಮಿ ಹಾಗೂ ನಾರಾಯಣಪುರ ಗ್ರಾಮದ ಮುಖಂಡ ರೆಡ್ಡಿಯವರನ್ನು ಬಂಧಿಸಿ, ಸಿಕ್ಕಾಪಟ್ಟೆ ಹೊಡೆದಿರುವುದಲ್ಲದೆ ಮಾರನೆಯ ದಿನ ಬೇಡಿಗಳನ್ನು ತೊಡಿಸಿ ಸುಳ್ಳು ಮೊಕದ್ದಮೆಯ ಮೇಲೆ ಕೋರ್ಟಿಗೆ ಹಾಜರು ಮಾಡಿದರು. ಯಶವಂತಪುರ, ಪೀಣ್ಯ, ಮೈಸೂರು ರಸ್ತೆ, ವೈಟ್ ಫೀಲ್ಡ್ ಮುಂತಾದ ಕಡೆ ಸಿ. ಐ. ಟಿ. ಯು. ಕಾರ್ಯಕರ್ತರನ್ನು ಬಂಧಿಸಿ. ಅವರನ್ನೂ ಸಮಾಜಘಾತುಕರ ಪಟ್ಟಿಗೆ ಸೇರಿಸಿದ್ದಾರೆ. ಪೋಲೀಸರ ಹದ್ದು ಮೀರಿದ ವರ್ತನೆಯ ಬಗ್ಗೆ "ಕನ್ನಡ ಪ್ರಭ" ದಿನಪತ್ರಿಕೆ ತನ್ನ ತಾ. 4-12-79ರ ಸಂಚಿಕೆಯಲ್ಲಿ "ಸ್ವಲ್ಪದರಲ್ಲಿ ನ್ಯಾಯಾಧೀಶರೊಬ್ಬರು ಒಳಗೆ ಹೋಗುವುದು ತಪ್ಪಿತು" ಎಂದು ವರದಿ ಮಾಡಿದೆ. ಇದು ನಿಜಕ್ಕೂ ಅಧಿಕಾರ ದುರುಪಯೋಗದ ಪರಮಾವಧಿ.

ಸಂಜೆ ನಿಷೇಧಾಜ್ಞೆಯನ್ನು ಉಲ್ಲಂಘಿಸಿದ ಸೌಹಾರ್ದ ಸಮಿತಿ ಮುಖಂಡರಾದ ಕಾಂ. ಸೂರ್ಯನಾರಾಯಣ ರಾವ್, ಎಂ. ಎಸ್. ಕೃಷ್ಣನ್, ವಾಟಾಳ್ ನಾಗರಾಜ್, ರಘುಪತಿ, ಸುಬ್ರಮಣ್ಯಂ ಮುಂತಾದವರನ್ನು ಬಂಧಿಸಿದ ಪೋಲೀಸರು ನಂತರ ಬಿಡುಗಡೆ ಮಾಡಿದರು.

ಹಿಂದೆಂದೂ ಕಾಣದ ಕಾರ್ಮಿಕರ ಐಕ್ಯತೆ, ಜನತೆಯ ಬೆಂಬಲವನ್ನು ಗಮನಿಸಿ, ಚುನಾವಣೆಗಳು ಬರುತ್ತಿರುವ ಈ ಸಮಯದಲ್ಲಿ ಸರ್ಕಾರ ಕೂಡಲೇ ಎಚ್ಚೆತ್ತು ತನ್ನ ಕಾರ್ಮಿಕ ವಿರೋಧಿ ನೀತಿಯನ್ನು ಕೈಬಿಡಬೇಕು. ಕೂಡಲೇ ಮಧ್ಯ ಪ್ರವೇಶಿಸಿ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಿ, ಕಾರ್ಖಾನೆ ಮತ್ತೆ ನಡೆಯುವಂತಾಗಬೇಕು. ಇಲ್ಲವಾದಲ್ಲಿ ಕಾರ್ಮಿಕರು ಮತ್ತಷ್ಟು ಉಗ್ರ ಕ್ರಮಕ್ಕೆ ಹೋದಲ್ಲಿ ಸರಕಾರವೇ ಹೊಣೆಯಾಗಬೇಕಾಗುತ್ತದೆ.

○

ಮೈಕೋ ಕಾರ್ಮಿಕರ ಹೋರಾಟಕ್ಕೆ ಕೆ.ಪಿ.ಪಿ. ಡಬ್ಲ್ಯು. ಯೂನಿಯನ್ ಬೆಂಬಲ

ಕರ್ನಾಟಕ ಪ್ರಾವಿನ್ಶಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ವಿಸ್ತೃತಸಭೆಯು ತಾ. 3-12-79ರಂದು ಸಂಘದ ಉಪಾಧ್ಯಕ್ಷರಾದ ಕಾಂ ಎ. ಕೆ ವಿಶ್ವನಾಥರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನ ಸಂಘದ ಆಫೀಸಿನಲ್ಲಿ ನಡೆದು ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿದೆ.

ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲ :

ಬೆಂಗಳೂರಿನ ಮೈಕೋ ಕಾರ್ಮಿಕರ ಬೇಡಿಕೆಗಳಿಗೆ ಮತ್ತು ಹೋರಾಟಕ್ಕೆ ಬೆಂಬಲ ಕೊಡುವ, ಕೂಡಲೇ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿ ವಿವಾದವನ್ನು ಇತ್ಯರ್ಥಪಡಿಸಬೇಕೆಂದು ರಾಜ್ಯಸರ್ಕಾರವನ್ನು ಒತ್ತಾಯಪಡಿಸುವ, ಮೈಕೋ ನೌಕರರ ಸಂಘದ ಮುಖಂಡರಮೇಲೆ ನಡೆಯುವಗೂಂಡಾ ದಾಳಿಯನ್ನು ಖಂಡಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ದಾಂಡೇಲಿಯ ಪೇಪರ್‌ಮಿಲ್ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ ಕೊಡುವ ಗೊತ್ತುವಳಿಯನ್ನು ಸಭೆ ಅಂಗೀಕರಿಸಿತು.

ತೋಟ ಕಾರ್ಮಿಕರ ಕನಿಷ್ಟ ಕೂಲಿ :

ಅನೇಕ ತೋಟಗಳಲ್ಲಿ ಕಾರ್ಮಿಕರಿಗೆ ಒಪ್ಪಂದದ ಸಂಬಳ ಸಿಕ್ಕುತ್ತಿಲ್ಲ. ಎಲ್ಲಾ ತೋಟ ಕಾರ್ಮಿಕರಿಗೂ ಒಪ್ಪಂದದ ಪ್ರಕಾರ ಸಂಬಳ ಸಿಕ್ಕುವಂತೆ ಮಾಡಲು ಈ ಸಂಬಳವನ್ನು ಕನಿಷ್ಟ ಕೂಲಿ ಎಂದು ನಿರ್ಣಯಿಸಬೇಕೆಂದು ರಾಜ್ಯಸರಕಾರವನ್ನು ಆಗ್ರಹಪಡಿಸುವ ಠರಾವನ್ನು ಸಭೆಯು ಅಂಗೀಕರಿಸಿತು.

ಬೆಲೆಏರಿಕೆಯ ವಿರುದ್ಧ :

ದಿನ ಬಳಕೆಯ ವಸ್ತುಗಳ ತೀವ್ರ ಬೆಲೆಯೇರಿಕೆಯಿಂದಾಗಿ ತೋಟಕಾರ್ಮಿಕರ ಹಾಗೂ ಜನಸಾಮಾನ್ಯರು ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ. ಬೆಲೆ ಏರಿಕೆಯನ್ನು ತಡೆಯಲು ತುರ್ತುಕ್ರಮಗಳನ್ನು ತೆಗೆದುಕೊಳ್ಳಬೇಕೆಂದೂ ಎಲ್ಲಾ ತೋಟಕಾರ್ಮಿಕರಿಗೆ ಸೀಮೆಎಣ್ಣೆಯ ಸಕಾಲಿಕ ಕ್ರಮಬದ್ಧವಾದ ವಿತರಣೆಯ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಹೆಚ್. ಎಸ್. ಸಿ. ಎಲ್. ಕಾರ್ಮಿಕರ ಮೇಲೆ ನಡೆದ ಹಲ್ಲೆಯ ಖಂಡನೆ :

ಕಳೆದ ಅಕ್ಟೋಬರ್ 30 ರಂದು ಎಚ್.ಎಸ್.ಸಿ.ಎಲ್. ಕಾರ್ಮಿಕರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ, ಕುದುರೆಮುಖ ಪ್ರಾಜೆಕ್ಟಿನ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ರ ಪಕ್ಷಪಾತ ಧೋರಣೆಯನ್ನು ಖಂಡಿಸುವ, ನಿರಪರಾಧಿಗಳ ಮೇಲೆ ಹಾಕಿರುವ ಕ್ರಿಮಿನಲ್ ಕೇಸುಗಳನ್ನು ಹಿಂತೆಗೆಯಬೇಕೆಂದೂ, ನಿಜವಾದ ಅಪರಾಧಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

○

……ಎರಡು ಚುನಾವಣಾ ಪ್ರಣಾಳಿಕೆಗಳು

[ಒಂದನೇ ಪುಟದಿಂದ]

ಜನತಾಪಕ್ಷ ಕೂಡಾ ಸುಭದ್ರ ಸರಕಾರದ ಮಾತನ್ನೇ ಆಡುತ್ತಿದೆ. ಅವರ ಪ್ರಕಾರ ಮತ್ತೆ ಜನತಾಪಕ್ಷವನ್ನು 1977ರ ಮಾರ್ಚಿಯಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ಸ್ಥಾಪಿಸಲು ಓಟು ಕೊಟ್ಟಂತೆ ಈ ಬಾರಿಯೂ ಓಟು ಕೊಟ್ಟರೆ ಸುಭದ್ರ ಸರಕಾರ ರಚಿಸಲು ಸಾಧ್ಯ. ಆದರೆ, ಕೇವಲ ಎರಡೂವರೆ ವರ್ಷದ ಅವಧಿಯಲ್ಲಿ ಜನತಾ ಪಕ್ಷದ ಸರಕಾರ ಮತ್ತು ಪಕ್ಷ ಛಿದ್ರ ಛಿದ್ರವಾಗಲು ಕಾರಣವೇನೆಂದು ಹುಡುಕುವ ಗೋಜಿಗೆ ಅವರು ಹೋಗಿಲ್ಲ.

ಜನತಾಪಕ್ಷದ ನಾಯಕರು ತಮ್ಮ ಸರಕಾರ ಉರುಳಲು ಸ್ವಂತ ಹಿತಾಸಕ್ತಿ ಹಾಗೂ ಗುಂಪು ರಾಜಕೀಯವೇ ಕಾರಣವೆಂದು ಆರೋಪಿಸಿದ್ದಾರೆ. ತಮ್ಮ ಪಕ್ಷದ ಶೇಕಡ 30 ರಷ್ಟು ಪಾರ್ಲಿಮೆಂಟ್ ಸದಸ್ಯರು ಸ್ವಾರ್ಥಿಗಳೆಂದು ಒಪ್ಪುತ್ತಾರೆ. ತನ್ನ ಬೆಳವಣಿಗೆಯ ಬಗ್ಗೆ ಗಂಭೀರವಾಗಿ ಚಿಂತಿಸುವ ಯಾವುದೇ ರಾಜಕೀಯ ಪಕ್ಷ ಇಂತಹ ಪರಿಸ್ಥಿತಿಯನ್ನು ಹಗುರವಾಗಿ ತೆಗೆದುಕೊಳ್ಳುವುದಿಲ್ಲ, ಸ್ವಯಂ ಟೀಕೆಯಿಂದ ಆಗಿರುವ ತಪ್ಪುಗಳನ್ನು ತಿದ್ದುವ ಪ್ರಯತ್ನ ಮಾಡುತ್ತದೆ. ಆದರೆ, ಕಾಂಗ್ರೆಸ್ (ಐ)ನಂತೆ ಜನತಾಪಕ್ಷಕ್ಕೂ ಕೇವಲ ಅಧಿಕಾರದ ಆಸೆ ಮಾತ್ರ ಇರುವುದರಿಂದ ಹಿಂದಿನದೆಲ್ಲಾ ಮರೆತು ಮತ್ತೆ ತಮಗೆ ಅಧಿಕಾರ ಕೊಡಿ ಎಂದು ಮತದಾರನಿಗೆ ಕೇಳಿದ್ದಾರೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕಾಂಗ್ರೆಸ್ (ಐ) ಮತ್ತು ಜನತಾ ಪಕ್ಷಗಳೆರಡೂ ಅಧಿಕಾರಕ್ಕೆ ಬರಲು ಜನರಿಂದ ಮತ ಬೇಡುತ್ತಿದ್ದರೂ, ತಾವು ಅಧಿಕಾರಕ್ಕೆ ಮತ್ತೆ ಬರುತ್ತೇವೆಂಬ ಆತ್ಮವಿಶ್ವಾಸವಿಲ್ಲ. ಆದ್ದರಿಂದಲೇ ಎರಡೂ ಪಕ್ಷಗಳು ಅರ್ಥವಿಲ್ಲದ ವಾದ, ವಿವಾದಗಳನ್ನು ಮಾಡುತ್ತಿವೆ. ಪಕ್ಷಾಂತರದ ಬಗ್ಗೆ ಬಹಳಷ್ಟು ಮಾತನಾಡುವ ಇದೇ ಜನ ಬೇರೆಯವರನ್ನು ಪಕ್ಷಾಂತರಗೊಳಿಸುವುದಕ್ಕೆ ಅಥವಾ ತಾವೇ ಪಕ್ಷಾಂತರ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಕನಿಷ್ಟ ಒಂದು ವಿಷಯದಲ್ಲಿ ಕಾಂಗ್ರೆಸ್ (ಐ) ಮತ್ತು ಜನತಾಪಕ್ಷಗಳೆರಡೂ ಸಹಮತ ಹೊಂದಿವೆ. ಅದು ಯಾವುದೆಂದರೆ ಕೇರಳದಲ್ಲಿ ಕೋಯಾ ಮಂತ್ರಿಮಂಡಲ ಉಳಿಸುವುದಕ್ಕೆ, ಎಲ್ಲಿಂದಲಾದರೂ ಹೇಗಾದರೂ ಪಕ್ಷಾಂತರ ಮಾಡಿಸುವುದಕ್ಕೆ ಪ್ರಯತ್ನಿಸಿದರು.

ಜನತಾಪಕ್ಷದ ಮುಖಂಡ ಶ್ರೀ ಜಗಜೀವನ್‌ರಾವ್‌ರವರನ್ನು ಪಕ್ಷಾಂತರ ಮಾಡಿಸುವುದಕ್ಕೆ ಕಾಂಗ್ರೆಸ್ (ಐ) ಮಾಡಿದ ಪ್ರಯತ್ನಗಳು ಈಗ ಬಹಿರಂಗ ರಹಸ್ಯವಾಗಿದೆ. ಜಗಜೀವನ್ ರಾವ್ ಕೂಡಾ, ಅವರು ಹಾಕಿದ ಷರತ್ತುಗಳನ್ನು ಒಪ್ಪಿದ್ದರೆ ಪಕ್ಷಾಂತರ ಮಾಡಲು ತಯಾರಿದ್ದರು. ಕಾಂಗ್ರೆಸ್ (ಐ)ನ ಪ್ರಯತ್ನಗಳು ವಿಫಲವಾಗಿದ್ದರೂ ಈ ದಿಸೆಯಲ್ಲಿ, ಕಾಂಗ್ರೆಸ್ (ಐ) ಮತ್ತು ಜನತಾಪಕ್ಷಗಳ ಪ್ರಣಾಳಿಕಾ ಹೇಳಿಕೆಗಳು ಎಷ್ಟು ಸುಳ್ಳು ಎಂಬುದನ್ನು ತೋರಿಸಿದೆ. ಕಾಂಗ್ರೆಸ್ (ಐ)ನ ಪ್ರಕಾರ ಇಂದಿರಾಗಾಂಧಿಯವರ ನಾಯಕತ್ವ ಮಾತ್ರ ದೇಶವನ್ನು ಉಳಿಸಬಲ್ಲದು ಹಾಗೆಯೇ ಜನತಾಪಕ್ಷದವರ ಅಭಿಪ್ರಾಯದಲ್ಲಿ ಪಕ್ಷಾಂತರವನ್ನು ನಿರ್ಮೂಲನಗೊಳಿಸುವುದೇ ಎಲ್ಲರ ಆದ್ಯ ಕರ್ತವ್ಯವಾಗಬೇಕು.

ಎರಡೂ ಪಕ್ಷಗಳು ತಮ್ಮ ಗುರಿ ಸಾಧನೆಗಾಗಿ ಯಾವ ಮಾರ್ಗವನ್ನು ಬೇಕಾದರೂ ಅನುಸರಿಸಲು ಸಿದ್ಧರಾಗಿದ್ದಾರೆ. ಬಹಿರಂಗವಾಗಿ ಪರಸ್ಪರ ಕಚ್ಚಾಡುತ್ತಿದ್ದರೂ ಎರಡು ಪಕ್ಷಗಳು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲು ಹರಿಯಾನ, ಬಿಹಾರ್ ಮತ್ತು ಕೇರಳಗಳಲ್ಲಿ ಒಪ್ಪಂದಕ್ಕೆ ಬಂದಂತೆ, ಅಖಿಲ ಭಾರತ ಮಟ್ಟದಲ್ಲಿಯೂ ಬರುವ ಸಾಧ್ಯತೆಗಳಿವೆ. ಆದ್ದರಿಂದ, ಪ್ರಜಾಪ್ರಭುತ್ವದ ಉಳಿವಿಗಾಗಿ ಹಾಗೂ ದುಡಿಯುವ ವರ್ಗದ ಹಿತರಕ್ಷಣೆಗಾಗಿ ಈ ಎರಡು ಪಕ್ಷಗಳನ್ನು ಅಧಿಕಾರದಿಂದ ದೂರ ವಿಡಬೇಕಾಗಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಇತರೆ ಎಡ ಹಾಗೂ ಪ್ರಜಾಸತ್ತಾತ್ಮಕ ಪಕ್ಷಗಳೊಂದಿಗೆ ಜನತೆಗೆ ಹೇಳಬಯಸುವುದೇನೆಂದರೆ, ಸುಭದ್ರತೆ, ಪ್ರಜಾಪ್ರಭುತ್ವ, ಜಾತ್ಯಾತೀತತೆ ಹಾಗೂ ದುರ್ಬಲ ವರ್ಗಗಳಿಗೆ ರಕ್ಷಣೆ ಬೇಕಾದರೆ ಕಾಂಗ್ರೆಸ್ (ಐ) ಮತ್ತು ಜನತಾ ಪಕ್ಷಗಳನ್ನು ಚುನಾವಣೆಗಳಲ್ಲಿ ಸೋಲಿಸಬೇಕಾಗಿದೆ.

ಏಳನೇ ಲೋಕಸಭೆಯಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು, ಗುಂಪುಗಳು ಹಾಗೂ ವ್ಯಕ್ತಿಗಳ ಪ್ರಾತಿನಿಧ್ಯ ಹೆಚ್ಚಾಗುವುದರ ಜೊತೆಯಲ್ಲಿ ವರ್ಗ ಸೀಮಿತ್ವವಿರುವ ಪಕ್ಷಗಳಾದ ಕಾಂಗ್ರೆಸ್, ಲೋಕದಳ, ಅಣ್ಣಾ ಡಿ. ಎಂ. ಕೆ. ಹಾಗೂ ಅಕಾಲಿ ಮುಂತಾದ ಪಕ್ಷಗಳು ಕಾಂಗ್ರೆಸ್ (ಐ) ಮತ್ತು ಜನತಾ ಪಕ್ಷಗಳನ್ನು ಸೋಲಿಸಲು ಬದ್ಧರಾಗಿರುವುದರಿಂದ ಸಾಕಷ್ಟು ಸಂಖ್ಯೆಯಲ್ಲಿ ಸ್ಥಾನಗಳನ್ನು ಗಳಿಸಿ ಸರ್ಕಾರ ರಚಿಸಲು ಅವಕಾಶವಾಗುವಂತೆ ಹೋರಾಡಬೇಕೆಂದು ಪೊಲಿಟ್ ಬ್ಯೂರೋ ಕರೆ ನೀಡಿದೆ. ○

ಮಂಗಳೂರಿನಿಂದ ಸಿ. ಪಿ. ಐ. (ಎಂ)ಸ್ಪರ್ಧೆ

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಮಹಾಬಲೇಶ್ವರ ಭಟ್ (ಎಂ. ಕೆ. ಭಟ್) ರವರು ಮಂಗಳೂರು ಕ್ಷೇತ್ರದಿಂದ ಡಿಸೆಂಬರ್ 6 ರಂದು ತಮ್ಮ ನಾಮಪತ್ರ ಸಲ್ಲಿಸಿದರು.

ದೇಶದಲ್ಲಿನ ಪ್ರಸ್ತುತ ಗಂಡಾಂತರಕಾರಿ ಶಕ್ತಿಗಳಾದ ಸರ್ವಾಧಿಕಾರಿ ಮತ್ತು ಜಾತೀಯ ಶಕ್ತಿಗಳನ್ನು ಸೋಲಿಸಲು ಸಿ. ಪಿ. ಐ. (ಎಂ), ಸಿ. ಪಿ. ಐ. ಮತ್ತು ಕಾಂಗ್ರೆಸ್ (ಯು) ಮತ್ತಿತರ ಪ್ರಗತಿಪರ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಹೋರಾಡಬೇಕೆಂದು ತೀರ್ಮಾನಿಸಲಾಗಿದ್ದರೂ ಮಾತುಕತೆ ನಡೆಯುತ್ತಿರುವ ಮಧ್ಯದಲ್ಲೇ ಅರಸು ನೇತೃತ್ವದ ಕಾಂಗ್ರೆಸ್ ಪಕ್ಷವು ತನ್ನ ಅಭ್ಯರ್ಥಿಯನ್ನು ಏಕಪಕ್ಷೀಯವಾಗಿ ಮಂಗಳೂರು ಕ್ಷೇತ್ರಕ್ಕೆ ಪ್ರಕಟಿಸಿದ್ದುದರಿಂದ ತಾನೂ ಕೂಡ ತನ್ನ ಅಭ್ಯರ್ಥಿಯ ನಾಮಪತ್ರ ಸಲ್ಲಿಸಬೇಕಾಗಿ ಬಂತೆಂದು ಸಿ. ಪಿ. ಐ. (ಎಂ) ಪ್ರಕಟಣೆ ತಿಳಿಸಿದೆ.

ಮಂಗಳೂರು ಕ್ಷೇತ್ರವನ್ನು ತಮ್ಮ ಪಕ್ಷಕ್ಕೆ ಬಿಟ್ಟುಕೊಡಬೇಕೆಂದು ಕಾಂಗ್ರೆಸ್ (ಯು) ಜತೆ ಮಾತುಕತೆ ನಡೆಸುತ್ತಿರುವ ಮಧ್ಯದಲ್ಲೇ ಕಾಂಗ್ರೆಸ್ ಪಕ್ಷ ತನ್ನ ಅಭ್ಯರ್ಥಿಯನ್ನು ಘೋಷಿಸಿದ್ದು ದುರಾದೃಷ್ಟಕರವೆಂದು ಹೇಳಿರುವ ಸಿ. ಪಿ. ಐ. (ಎಂ) ಪ್ರಕಟಣೆ ಈಗಲೂ ಕಾಲ ಮಿಂಚಿಲ್ಲ. ಮಾತುಕತೆಯನ್ನು ಮುಂದುವರಿಸಿ ಒಂದು ರೀತಿಯ ಒಡಂಬಡಿಕೆಗೆ ಬರಲು ಸಾಧ್ಯವಿದೆ ಎಂದು ಪಕ್ಷ ಆಶಿಸಿದೆ.

ಸರ್ವಾಧಿಕಾರಿ ಹಾಗೂ ಕೋಮುವಾದಿ ಶಕ್ತಿಗಳನ್ನು ಅವಿರತವಾಗಿ ಹೋರಾಡುತ್ತಿರುವ ತಮ್ಮ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಪ್ರಗತಿಪರ, ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗಟ್ಟು ಮಾಡುವುದರ ಮೂಲಕ ಸಾಮಾನ್ಯ ಶತ್ರುಗಳನ್ನು ಸೋಲಿಸಲು ಸಾಧ್ಯವಿದೆ ಎಂಬುದನ್ನು ಕಾಂಗ್ರೆಸ್ ನಾಯಕರು ಅರಿತರೆ ಕ್ಷೇಮಕರ ಎಂದೂ ಸಹ ಮಂಗಳೂರಿನಿಂದ ಹೊರಡಿಸಲಾಗಿರುವ ಸಿ. ಪಿ. ಐ. (ಎಂ) ಪ್ರಕಟಣೆ ಹೇಳಿದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053. Editorial and managerial office : L-56, K. V. Temple Street, Sultanpet, Bangalore-560 053. Phone : 34154
EDITOR : M. K. BHAT